ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 07, 2022

ಸಂಪುಟ : 49 ಸಂಚಿಕೆ : 54 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com



ಚಿತ್ರ: ರಫೀಕ್, ಜನತಾವಾಣಿ

**ಮಳೆಯಲಿ..ಜೊತೆಯಲ್ಲಿ ಗೋಲ್‌ಗಪ್ಪಾ..**

ದಾವಣಗೆರೆಯಲ್ಲಿ ಜಿಟಿ ಜಿಟಿ ಮಳೆ ಸುರಿಯುತ್ತಲೇ ಇದೆ. ಥಂಡಿ ವಾತಾವರಣದ ನಡುವೆ ಬಾಯಲ್ಲಿ ನಿರೂರಿಸುವ ಗೋಲ್ ಗಪ್ಪಾ ಅಥವಾ ಪಾನಿಪುರಿ ಸೇವನೆಗೆ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ಬುಧವಾರ ಮಧ್ಯಾಹ್ನವೇ ಹುಡುಗಿಯರು ಮುತ್ತಿಗೆ ಹಾಕಿದ್ದರು.

# ಕಿ.ಮೀ. ಲೆಕ್ಕದ ಮೇಲೆ ವಾಹನ ವಿಮೆ

**ಸುಧಾರಿತ ಉಪಕರಣಗಳ ಮೂಲಕ ಹೊಸ ರೀತಿಯ ವಿಮೆ ನೀಡಲು ಐ.ಆರ್.ಡಿ.ಎ.ಐ. ಅನುಮತಿ**



**ಮನೆಯಿಂದಲೇ ಕೆಲಸ ಮಾಡುವ ವ್ಯಕ್ತಿಗಳಿಗೆ ಹೊಸ ವಿಮಾ ನೀತಿ ಉಪಯುಕ್ತ**

ನವದೆಹಲಿ, ಜು. 6 – ವಿಮಾ ಕಂಪನಿಗಳು ಮೋಟಾರು ವಿಮೆ ಪಾಲಿಸಿಗಳನ್ನು ನೀಡುವಾಗ ಸುಧಾರಿತ ಉಪಕರಣಗಳನ್ನು ಹೆಚ್ಚುವರಿಯಾಗಿ ಅಳವಡಿಸಲು ವಿಮಾ ನಿಯಂತ್ರಕ ಐ.ಆರ್.ಡಿ.ಎ.ಐ. ಅನುಮತಿ ನೀಡಿದೆ.

ಈ ವ್ಯವಸ್ಥೆಯ ಅನ್ವಯ, ಟೆಲಿಮ್ಯಾಟಿಕ್ ಆಧರಿತ ಉಪಕರಣಗಳ ಮೂಲಕ ವಾಹನಗಳನ್ನು ಬಳಸುವ ಪ್ರಮಾಣ ಹಾಗೂ ಚಾಲಕರ ವರ್ತನೆಯನ್ನು ಅಳೆದು ವಿಮಾ ಕಂತುಗಳನ್ನು ನಿರ್ಧರಿಸಲಾಗುವುದು.

ಎಷ್ಟು ಬಳಸುತ್ತೀರೋ ಹಾಗೂ ಯಾವ ರೀತಿ ಬಳಸುತ್ತೀರೋ ಅದಕ್ಕೆ ಅನುಗುಣವಾಗಿ ವಿಮಾ ಕಂತು ಪಾವತಿಸಿ ಎಂಬ ಸೂತ್ರದ ಅನ್ವಯ ಹೊಸ ವ್ಯವಸ್ಥೆಗೆ ಅನುಮತಿ ನೀಡಲಾಗಿದೆ.

ಇದೇ ವೇಳೆ, ಒಬ್ಬ ವ್ಯಕ್ತಿಯ ಮಾಲೀಕತ್ವದಲ್ಲಿರುವ ದ್ವಿಚಕ್ರ ವಾಹನಗಳು ಹಾಗೂ ಖಾಸಗಿ ಕಾರುಗಳಿಗೆ ಫ್ಲೋಟರ್ ಪಾಲಿಸಿ ನೀಡಲು ಅನುಮತಿ ನೀಡಲಾಗಿದೆ.

ಈಗಿರುವ ಮೂಲ ಮೋಟಾರು ವಾಹನ ಪಾಲಿಸಿಗಳಿಗೆ ಹೆಚ್ಚುವರಿಯಾಗಿ ಹೊಸ ಸೇವೆಗಳನ್ನು ಒದಗಿಸಲಾಗುವುದು. ಹೊಸ ವಿಮಾ ನೀತಿಯ ಅನ್ವಯ ಗ್ರಾಹಕರು ತಾವು ಎಷ್ಟು ಕಿಲೋಮೀಟರ್ ವಾಹನ ಓಡಿಸುತ್ತಾರೋ, ಅಷ್ಟಕ್ಕೆ ಮಾತ್ರ ವಿಮೆ ಪಡೆಯಲು ಅವಕಾಶವಾಗಲಿದೆ. ಇದರಿಂದ ವಿಮಾ ಕಂತುಗಳು ಹೆಚ್ಚು ಕೈಗೆಟಕುವ ದರದಲ್ಲಿ ದೊರೆಯಲಿವೆ ಎಂದು ಬಜಾಜ್ ಅಲೈಯನ್ಸ್ ವಿಮಾ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಟಿ.ಎ. ರಾಮಲಿಂಗಂ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾದಂತಹ ದೇಶಗಳಲ್ಲಿ ಈಗಾಗಲೇ ಬಳಸಿದಷ್ಟೇ ವಿಮೆ ಪಾವತಿಸುವ ವ್ಯವಸ್ಥೆ ಇದೆ. ಭಾರತದಲ್ಲಿ ಜಾರಿಗೆ ತರಲಾಗುತ್ತಿರುವ ಹೊಸ ನಿಯಮಗಳಿಂದ ಎಚ್ಚರಿಕೆಯಿಂದ ಹಾಗೂ ಕಡಿಮೆ ವಾಹನ ಬಳಸುವ ಗ್ರಾಹಕರಿಗೆ ವಿಮೆ ವೆಚ್ಚ ಕಡಿಮೆಯಾಗಲಿದೆ ಎಂದು ಸೆಕ್ಯೂರ್‌ನೌ ಸಂಸ್ಥೆಯ ಸಹ ಸ್ಥಾಪಕ ಕಪಿಲ್ ಮೆಹ್ತ ಹೇಳಿದ್ದಾರೆ.

ಮನೆಯಿಂದಲೇ ಕೆಲಸ ಮಾಡುವ ವ್ಯಕ್ತಿಗಳಿಗೆ ಹೊಸ ವಿಮಾ ನೀತಿ ಉಪಯುಕ್ತವಾಗಲಿದೆ. ಕೊರೊನಾ ನಂತರ ಜನರ ಕೆಲಸ ಹಾಗೂ ಪ್ರಯಾಣದ ಪದ್ಧತಿ ಬದಲಾಗಿದೆ. ಅವರಿಗೆ ಹೊಸ ನೀತಿ ಅನುಕೂಲ ತರಲಿದೆ ಎಂದು ಲಿಬರ್ಟಿ ವಿಮಾ ಸಂಸ್ಥೆಯ ಅಧ್ಯಕ್ಷ ಉದಯನ್ ಜೋಷಿ ಹೇಳಿದ್ದಾರೆ.

# ಬಿ-ಖಾತೆದಾರರಿಗೆ ಎ-ಖಾತೆ ಕೊಡಲು ನಿರ್ಧಾರ

## ಲಕ್ಷಾಂತರ ಜನರಿಗೆ ಇನ್ನೆರಡು ತಿಂಗಳಲ್ಲಿ ಎ-ಖಾತಾ ದಾಖಲೆ ಲಭ್ಯವಾಗಲಿವೆ: ಸಚಿವ ಭೈರತಿ

ಬೆಂಗಳೂರು, ಜು. 6 – ನಗರ ಪ್ರದೇಶಗಳಲ್ಲಿ ಬಿ-ಖಾತಾ ನಿವೇಶನದಾರರಿಗೆ ಎ-ಖಾತಾ ನೀಡಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.

ಬೆಂಗಳೂರು ಸೇರಿದಂತೆ, ಎಲ್ಲಾ ಮಹಾನಗರ ಪಾಲಿಕೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಲಕ್ಷಾಂತರ ಬಿ-ಖಾತಾ ನಿವೇಶನದಾರರಿಗೆ ಪೂರ್ಣ ಪ್ರಮಾಣದ ಹಕ್ಕು ನೀಡುವ ತೀರ್ಮಾನವನ್ನು ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದಾರೆ.

ಸರ್ಕಾರದ ನಿರ್ಧಾರವನ್ನು ಸುದ್ದಿಗಾರರಿಗೆ ತಿಳಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಇನ್ನೆರಡು ತಿಂಗಳಲ್ಲಿ ಬಿ-ಖಾತಾ ದಾರರಿಗೆ ಎ-ಖಾತಾ ದಾಖಲೆಗಳು ಲಭ್ಯವಾಗಲಿವೆ ಎಂದು ಹೇಳಿದ್ದಾರೆ.

ಲಕ್ಷಾಂತರ ಮಂದಿ ಎ-ಖಾತಾ ಪಡೆಯಲು ಕಳೆದ ಕೆಲವು ವರ್ಷಗಳಿಂದ ಕಚೇರಿಗಳಿಗೆ ಅಲೆದಾಟ ನಡೆಸುತ್ತಿದ್ದರು. ಅದನ್ನು ತಪ್ಪಿಸಿ, ಅವರಿಗೆ ಪೂರ್ಣ ಪ್ರಮಾಣದ ಹಕ್ಕುಪತ್ರಗಳನ್ನು ನೀಡುವ ಜನಪರ ತೀರ್ಮಾನ ಕೈಗೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

**600 ಕೋಟಿ ರೂ. ಬಾಕಿ**

**ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಬಿಲ್ ಬಾಕಿ ಪ್ರಮಾಣ 600 ಕೋಟಿ ರೂಪಾಯಿಗಳಷ್ಟಿದ್ದು, ಒನ್ ಟೈಮ್ ಸೆಟ್ಲ್ ಮೆಂಟ್ ಆಧಾರದ ಮೇಲೆ ಬಾಕಿ ಪಾವತಿಗೆ ಅನುಕೂಲ ಮಾಡಿಕೊಡಲು ಯೋಚಿಸಲಾಗಿದೆ ಎಂದ ಅವರು, ಗ್ರಾಹಕರು ನೀರಿನ ಬಾಕಿಯನ್ನು ಪಾವತಿಸಿದರೆ, ಬಡ್ಡಿ ಮನ್ನಾ ಮಾಡುವುದು ಸರ್ಕಾರದ ಯೋಚನೆ ಎಂದರು.**

ಬಿ ಖಾತಾ ನಿವೇಶನದಾರರು ತಮ್ಮ ನಿವೇಶನ ಅಥವಾ ಅಲ್ಲಿ ಕಟ್ಟಿರುವ ಮನೆ, ಕಟ್ಟಡವನ್ನು ಅಡಮಾನವಾಗಿಟ್ಟು ಬ್ಯಾಂಕುಗಳಿಂದ ಸಾಲ ಪಡೆಯಲು ಇದುವರೆಗೂ ಸಾಧ್ಯವಿರಲಿಲ್ಲ. ಅದೇ ರೀತಿ ಇನ್ನೂ ಹಲವು ಸೌಲಭ್ಯಗಳು ಅವರಿಗೆ ದೊರೆಯುತ್ತಿರಲಿಲ್ಲ. ಸರ್ಕಾರದ ಈ ತೀರ್ಮಾನದಿಂದ ಅವರ ಎಲ್ಲ ಸಮಸ್ಯೆಗಳು ಬಗೆಹರಿದಿರುವುದಲ್ಲದೆ, ಈ ಖಾಸಗಿ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಹಕಾರಿಯಾಗಲಿದೆ ಎಂದು ಸಚಿವರು ಹೇಳಿದ್ದಾರೆ.

ಖಾತಾ ಪರಿವರ್ತನೆಯಿಂದ ನಗರ ಸ್ಥಳೀಯ ಸಂಸ್ಥೆಗಳಿಗೂ ನೂರಾರು ಕೋಟಿ ರೂಪಾಯಿ ಆದಾಯ ಬರಲಿದ್ದು, ಅವುಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಹೆಚ್ಚು ಶಕ್ತಿ ದೊರೆಯಲಿದೆ ಎಂದೂ ಅವರು ಹೇಳಿದ್ದಾರೆ.

ಅಭಿವೃದ್ಧಿ ಪ್ರಾಧಿಕಾರಿಗಳ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಬಡಾವಣೆಗಳಲ್ಲಿ ನಾಗರಿಕ ಬಳಕೆಗೆಂದು ಮೀಸಲಿಟ್ಟ ಒತ್ತುವರಿಯಾಗಿರುವ ಸಿಎ ನಿವೇಶನಗಳನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು. ಅಷ್ಟೇ ಅಲ್ಲ ಸಮರ್ಪಕ ನಿರ್ವಹಣೆಯಿಲ್ಲದೆ ಪಾಳು ಬಿದ್ದಿರುವ ನಿವೇಶನಗಳ ಬಗ್ಗೆ ಪೂರ್ಣ ವರದಿ ನೀಡುವಂತೆ ಪ್ರಾಧಿಕಾರಗಳಿಗೆ ಆದೇಶಿಸಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

(2ನೇ ಪುಟಕ್ಕೆ)

# ರಾಜ್ಯಸಭೆಗೆ ವೀರೇಂದ್ರ ಹೆಗ್ಗಡೆ ನಾಮಕರಣ



**ಪಿ.ಟಿ. ಉಷಾ, ಸಂಗೀತ ನಿರ್ದೇಶಕ ಇಳಯರಾಜ, ಚಿತ್ರ ಕಥೆಗಾರ ವಿಜಯೇಂದ್ರ ಪ್ರಸಾದ್‌ಗೆ ಮೇಲ್ಮನೆ ಪ್ರವೇಶ**

ನವದೆಹಲಿ, ಜು. 6 – ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಸೇರಿದಂತೆ, ದಕ್ಷಿಣದ ರಾಜ್ಯಗಳ ನಾಲ್ವರನ್ನು ರಾಜ್ಯಸಭೆಗೆ ನಾಮಕರಣ ಮಾಡಲಾಗಿದೆ. ದಕ್ಷಿಣದ ರಾಜ್ಯಗಳಲ್ಲಿ ಬೇರು ಬಿಡಲು ಬಿಜೆಪಿ ಈ ಕ್ರಮ ತೆಗೆದುಕೊಂಡಿದೆ ಎಂದು ಹೇಳಲಾಗುತ್ತಿದೆ.

ಹೆಸರಾಂತ ಕ್ರೀಡಾಪಟು ಪಿ.ಟಿ. ಉಷಾ, ಸಂಗೀತ ನಿರ್ದೇಶಕ ಇಳಯರಾಜ ಹಾಗೂ ಚಿತ್ರಕಥಾ ಲೇಖಕ ಕೆ.ವಿ. ವಿಜಯೇಂದ್ರ ಪ್ರಸಾದ್ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಲಾಗಿದೆ.

ವೀರೇಂದ್ರ ಹೆಗ್ಗಡೆ ಕರ್ನಾಟಕ, ವಿಜಯೇಂದ್ರ ಪ್ರಸಾದ್ ಅವರು ಆಂಧ್ರಪ್ರದೇಶ, ಉಷಾ ಅವರು ಕೇರಳ ಮತ್ತು ಇಳಯರಾಜ ಅವರು ತಮಿಳುನಾಡಿಗೆ ಸೇರಿದವರಾಗಿದ್ದಾರೆ.

ಕೆಲವೇ ದಿನಗಳ ಹಿಂದಷ್ಟೇ ಹೈದರಾಬಾದ್‌ನಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಸಿದ್ದ ಬಿಜೆಪಿ, ಮುಂದಿನ ಹಂತದ ಬೆಳವಣಿಗೆಯನ್ನು ದಕ್ಷಿಣದ ರಾಜ್ಯಗಳಲ್ಲಿ ಕಾಣಬೇಕು ಎಂಬ ಬಗ್ಗೆ ಸುದೀರ್ಘ ಚರ್ಚೆ ನಡೆಸಿತ್ತು. ಮೇಲ್ಮನೆಗೆ ಆಯ್ಕೆಯಾದ ನಾಲ್ವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಿರುವ ಪ್ರಧಾನಿ ಮೋದಿ, ಸಮುದಾಯಕ್ಕೆ ಮಹೋನ್ನತ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ವೀರೇಂದ್ರ ಹೆಗ್ಗಡೆಯವರು ಮುಂಚೂಣಿಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ. ಧರ್ಮಸ್ಥಳದ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸುವ ಅವಕಾಶ ಹಾಗು ಅವರು ಆರೋಗ್ಯ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೈಗೊಂಡಿರುವ ಮಹತ್ತರ ಕಾರ್ಯಗಳಿಗೆ ಸಾಕ್ಷಿಯಾಗುವ ಅವಕಾಶ ನನಗೆ ಒದಗಿತ್ತು ಎಂದಿರುವ ಪ್ರಧಾನಿ, ಖಂಡಿತವಾಗಿ ಅವರು ಸಂಸದೀಯ ನಡಾವಳಿಗಳನ್ನು ಮತ್ತಷ್ಟು ಉತ್ಕೃಷ್ಟಗೊಳಿಸುವರು ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

(2ನೇ ಪುಟಕ್ಕೆ)

# ದಾವಣಗೆರೆಯ ಸಿದ್ದರಾಮೋತ್ಸವದ ಸಮಿತಿ ರಚನೆ



ಬೆಂಗಳೂರು, ಜು. 6 - ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯನವರ 75ನೇ ಹುಟ್ಟು ಹಬ್ಬದ ಅಂಗವಾಗಿ ದಾವಣಗೆರೆಯಲ್ಲಿ ಬರುವ ಆಗಸ್ಟ್ 3 ರಂದು ನಡೆಸುತ್ತಿರುವ ಸಿದ್ದರಾಮೋತ್ಸವಕ್ಕಾಗಿ ಸಮಿತಿಯೊಂದನ್ನು ರಚಿಸಲಾಗಿದೆ.

ಆಚರಣೆಗಾಗಿಯೇ ಅಮೃತ ಮಹೋತ್ಸವ ಸಮಿತಿ ರಚಿಸಿದ್ದು, ಸಮಿತಿಯಲ್ಲಿ 150 ಪದಾಧಿಕಾರಿಗಳನ್ನು ಗೌರವಾಧ್ಯಕ್ಷ ಆರ್.ವಿ. ದೇಶಪಾಂಡೆ ನೇಮಕ ಮಾಡಿದ್ದಾರೆ.

ಇಡೀ ರಾಜ್ಯಾದ್ಯಂತ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ಪ್ರಮುಖ ಕಾರ್ಯಕರ್ತರು, ಇಲ್ಲವೇ ಶಾಸಕರು, ಪದಾಧಿಕಾರಿಗಳು ಪಟ್ಟಿಯಲ್ಲಿದ್ದಾರೆ. ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ವೀರಪ್ಪ ಮೊಯಿಲಿ, ಡಾ. ಜಿ. ಪರಮೇಶ್ವರ್, ಡಿ.ಕೆ. ಶಿವಕುಮಾರ್ ಸೇರಿದಂತೆ ಕೆಲವು ನಾಯಕರನ್ನು ಹೊರತುಪಡಿಸಿದರೆ, ಉಳಿದ ಎಲ್ಲ ನಾಯಕರು ಸಮಿತಿಯಲ್ಲಿದ್ದು, ಮಹೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಯಶಸ್ವಿಗೊಳಿಸಿ, ಒಂದು ರಾಜಕೀಯ ತಿರುವು ಪಡೆಯಲು ಹೊರಟಿದ್ದಾರೆ.

ಸಮಿತಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೆರಳೆಣಿಕೆಯಷ್ಟು ಅವರ ಬೆಂಬಲಿಗರು ಇದ್ದರೆ, ಉಳಿದವರೆಲ್ಲರೂ ಸಿದ್ದರಾಮಯ್ಯನವರ ಅನುಯಾಯಿಗಳೇ.

ಕಾರ್ಯಕಾರಿ ಸಮಿತಿಯಲ್ಲಿ ಐವರು ಪದಾಧಿಕಾರಿಗಳಿದ್ದರೆ, 25 ಮಂದಿ ಉಪಾಧ್ಯಕ್ಷರು, 23 ಮಂದಿ ಪ್ರಧಾನ ಕಾರ್ಯದರ್ಶಿಗಳು, 13 ಮಂದಿ ಸಂಘಟನಾ ಕಾರ್ಯದರ್ಶಿಗಳು ಸಮಿತಿಯಲ್ಲಿದ್ದಾರೆ.

ದಾವಣಗೆರೆಯಲ್ಲಿ ನಡೆಯುತ್ತಿರುವ ಈ ಸಮಾವೇಶಕ್ಕೆ ಐದು ಲಕ್ಷ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಈಗಾಗಲೇ ಅಧ್ಯಕ್ಷರು ತಿಳಿಸಿದ್ದಾರೆ.

ಬೀದರ್‌ನಿಂದ ಹಿಡಿದು ಚಾಮರಾಜನಗರದವರನ್ನು ಸಮಾವೇಶಕ್ಕೆ ಕರೆತರುವ ಮತ್ತು ಅವರನ್ನು ನೋಡಿಕೊಳ್ಳುವ ಹೊಣೆಗಾರಿಕೆ ಈ ಪದಾಧಿಕಾರಿಗಳ ಜವಾಬ್ದಾರಿಗೆ ಸೇರಿರುತ್ತದೆ.

# ಅಡುಗೆ ಅನಿಲ ದರ 50 ರೂ. ಹೆಚ್ಚಳ

ನವದೆಹಲಿ ಜು. 6 – ಬುಧವಾರ ಅಡುಗೆ ಅನಿಲದ ಬೆಲೆಯನ್ನು 50 ರೂ.ಗಳಷ್ಟು ಹೆಚ್ಚಿಸ ಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅನಿಲ ಬೆಲೆ ಹೆಚ್ಚಾಗುತ್ತಿರುವ ಕಾರಣ ಈ ಬೆಳವಣಿಗೆಯಾಗಿದೆ.



14.2 ಕೆಜಿ ಅಡುಗೆ ಅನಿಲದ ದರ ರಾಜಧಾನಿ ದೆಹಲಿಯಲ್ಲಿ 1,053 ರೂ.ಗಳಿಗೆ ತಲುಪಿದೆ ಎಂದು ಸರ್ಕಾರಿ ಸ್ವಾಮ್ಯದ ಇಂಧನ ಕಂಪನಿಗಳು ತಿಳಿಸಿವೆ.

ಮೇ ತಿಂಗಳ ನಂತರ ಮೂರನೇ ಬಾರಿ ಹಾಗೂ ಈ ವರ್ಷ ನಾಲ್ಕನೇ ಬಾರಿ ಅನಿಲ ಬೆಲೆ ಹೆಚ್ಚಿಸಲಾಗಿದೆ. ಒಟ್ಟಾರೆ ವರ್ಷದಲ್ಲಿ ಅನಿಲ ಬೆಲೆಯನ್ನು 244 ರೂ.ಗಳಷ್ಟು ಹೆಚ್ಚಿಸಲಾಗಿದೆ. ಮಾರ್ಚ್ 2022ರ ನಂತರ 153.50 ರೂ.ಗಳ ಬೆಲೆ ಏರಿಕೆಯಾಗಿದೆ. ಆದರೆ, ಕಳೆದ ಮೂರು ತಿಂಗಳಿನಿಂದ ಪೆಟ್ರೋಲ್ ಹಾಗೂ ಡೀಸೆಲ್ ದರಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.

# ವಿದೇಶಿ ವಿನಿಮಯ ನಿಯಮ ಸಡಿಲಿಕೆ

ಮುಂಬೈ, ಜು. 6 – ವಿದೇಶಿ ವಿನಿಮಯ ಹರಿವಿಗೆ ಉತ್ತೇಜನ ನೀಡುವ ಸಲುವಾಗಿ ವಿದೇಶ ವಿನಿಮಯ ನಿಯಮಗಳಲ್ಲಿ ರಿಸರ್ವ್ ಬ್ಯಾಂಕ್ ಸಡಿಲಿಕೆ ತಂದಿದೆ. ಇ.ಸಿ.ಬಿ. ಮಾರ್ಗವಾಗಿ ಸಾಲ ಪಡೆಯುವ ಮಿತಿ ಯನ್ನು ಎರಡು ಪಟ್ಟು ಹೆಚ್ಚಿಸುವ ಕ್ರಮವನ್ನೂ ತೆಗೆದು ಕೊಳ್ಳಲಾಗಿದೆ. ಡಾಲರ್ ಎದುರು ರೂಪಾಯಿ ಬೆಲೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ. ಪ್ರಸಕ್ತ ವರ್ಷದಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಶೇ.4.1ರಷ್ಟು ಕುಸಿದಿದೆ.

# ಮುನ್ನೆಚ್ಚರಿಕಾ ಡೋಸ್ ಅಂತರ 6 ತಿಂಗಳಿಗೆ ಇಳಿಸಿದ ಕೇಂದ್ರ

ನವದೆಹಲಿ, ಜು. 6 – ಕೊರೊನಾ ಲಸಿಕೆಯ ಮುನ್ನೆಚ್ಚರಿಕಾ ಡೋಸ್ ಪಡೆಯುವ ಅಂತರವನ್ನು 9 ತಿಂಗಳಿನಿಂದ 6 ತಿಂಗಳಿಗೆ ಇಳಿಕೆ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ತಜ್ಞರ ಸಮಿತಿಯ ಶಿಫಾರಸು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

2 ನೇ ಡೋಸ್ ಪಡೆದು 6 ತಿಂಗಳು ಪೂರ್ಣಗೊಂಡಿರುವ 18-59 ವರ್ಷದ ಎಲ್ಲಾ ಫಲಾನುಭವಿಗಳಿಗೆ ಮುನ್ನೆಚ್ಚರಿಕೆ


(2ನೇ ಪುಟಕ್ಕೆ)

# ವಾಹನಗಳಿಗೆ ಇಂಧನ ಮಾನದಂಡ

ನವದೆಹಲಿ, ಜು. 6 – ಮಾಲಿನ್ಯ ತಡೆಯುವ ಹಾಗೂ ಇಂಧನ ದಕ್ಷ ವಾಹನಗಳಿಗೆ ಉತ್ತೇಜನ ನೀಡುವ ಸಲುವಾಗಿ ಮುಂದಿನ ವರ್ಷದ ಏಪ್ರಿಲ್‌ನಲ್ಲಿ ಇಂಧನ ಬಳಕೆ ಮಾನದಂಡವನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಹಗುರ, ಮಧ್ಯಮ ಹಾಗೂ ಭಾರೀ ಮೋಟಾರು ವಾಹನಗಳಿಗೆ ಈ ಮಾನದಂಡ ಕಡ್ಡಾಯವಾಗಿರಲಿದೆ ಎಂದು ಕೇಂದ್ರ ತಿಳಿಸಿದೆ.

# ಖಾದ್ಯ ತೈಲ ಬೆಲೆ 10 ರೂ. ಇಳಿಸಲು ಕೇಂದ್ರದ ಸೂಚನೆ

ನವದೆಹಲಿ, ಜು. 6 – ಜಾಗತಿಕವಾಗಿ ಖಾದ್ಯ ತೈಲ ಬೆಲೆ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ, ದೇಶದ ಕಂಪನಿಗಳೂ ಸಹ ತೈಲದ ಗರಿಷ್ಠ ಮಾರಾಟ ಬೆಲೆಯನ್ನು 10 ರೂ.ಗಳಷ್ಟು ಇಳಿಸುವಂತೆ ಕೇಂದ್ರ ಸರ್ಕಾರ ತಿಳಿಸಿದೆ.



ದೇಶಕ್ಕೆ ಅಗತ್ಯವಾದ ಖಾದ್ಯ ತೈಲದಲ್ಲಿ ಶೇ.60ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಕಳೆದ ಒಂದು ತಿಂಗಳಿನಿಂದ ತೈಲ ಬೆಲೆಯಲ್ಲಿ ಇಳಿಕೆ ಕಂಡು ಬರುತ್ತಿದೆ.

ಖಾದ್ಯ ತೈಲ ಒಕ್ಕೂಟಗಳ ಜೊತೆ ಮಾತುಕತೆ ನಡೆಸಿರುವ ಕೇಂದ್ರ ಆಹಾರ ಕಾರ್ಯದರ್ಶಿ ಸುಧಾಂಶು ಪಾಂಡೆ, ಮಾರಾಟ ಬೆಲೆಯಲ್ಲಿ ಇಳಿಕೆ ಮಾಡುವಂತೆ ಕೇಳಿದ್ದಾರೆ.

ಮುಂದಿನ ವಾರದಲ್ಲಿ ಆಮದು ತೈಲದ ಬೆಲೆಯನ್ನು ಲೀಟರ್‌ಗೆ ಕನಿಷ್ಠ 10 ರೂ. ಇಳಿಕೆ ಮಾಡುವುದಾಗಿ ಪ್ರಮುಖ

(2ನೇ ಪುಟಕ್ಕೆ)




ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ಸುರೇಶ್ ಪಿ. ಕುರ್ಡೇಕರ್ (ಉತ್ತಂಗಿ)
ಜನನ : 1963 - ನಿಧನ : 2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ... ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...

ಧರ್ಮಪತ್ನಿ ಮತ್ತು ಮಕ್ಕಳು, ಅಳಿಯಂದಿರು, ಸಹೋದರ-ಸಹೋದರಿಯರು, ಉತ್ತಂಗಿ, ಕುರ್ಡೇಕರ್ ಕುಟುಂಬದವರು

ಉತ್ತಂಗಿ ಜ್ಯೂಯಲರ್ಸ್
ಚೌಕಿಪೇಟೆ, ದಾವಣಗೆರೆ.

# ವಚನ ಸಾಹಿತ್ಯದ ಕೊಡುಗೆ ಅಪಾರ

## ಜಗಳೂರು: ವಚನ ದಿನಾಚರಣೆ ಕಾರ್ಯಕ್ರಮದಲ್ಲಿ ಸುಮತಿ ಜಯ್ಯಪ್ಪ




ಜಗಳೂರು, ಜು.6- ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಗಲು ವಚನ ಸಾಹಿತ್ಯದ ಕೊಡುಗೆ ಅನನ್ಯವಾದುದು ಎಂದು ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯ್ಯಪ್ಪ ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ತಾಲ್ಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ, ಮೆದಗಿನಕೆರೆ ಮುರಾರ್ಜಿ ದೇಸಾಯಿ ವಸತಿ ಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ವಚನ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವ್ಯ, ನವೋದಯ, ವಚನ ಸಾಹಿತ್ಯ, ದಾಸ ಸಾಹಿತ್ಯ ಹೀಗೆ ಹಲವು ಪ್ರಕಾರಗಳಿದ್ದರೂ 12ನೇ ಶತಮಾನದ ವಚನ ಸಾಹಿತ್ಯಕ್ಕೆ ತನ್ನದೇ ಆದ ಮಹತ್ವವಿದೆ. ಜನರ ಬದುಕಿಗೆ ಬೇಕಾದ ಮಹತ್ವದ ಆಶಯಗಳು ವಚನ ಸಾಹಿತ್ಯದಲ್ಲಿವೆ ಎಂದು ಅವರು ತಿಳಿಸಿದರು.

ವಚನಗಳನ್ನು ತಾಳೆಗರಿಯಿಂದ ಮುದ್ರಣಕ್ಕೆ ತಂದ ವಚನ ಸಾಹಿತ್ಯದ ಪಿತಾಮಹ ಫ.ಗು.ಹಳಕಟ್ಟಿಯವರ ಸ್ಮರಣಾರ್ಥ "ವಚನ ದಿನಾಚರಣೆ" ಆಚರಿ ಸುತ್ತಿರುವುದು ಅರ್ಥಪೂರ್ಣವಾಗಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಿವೃತ್ತ ಪ್ರಾಚಾರ್ಯ ಎಲ್.ಎಮ್. ಪ್ರಭಾಕರ್ ಲಕ್ಕೋಳ್, ವಚನ ಸಾಹಿತ್ಯದ ಪಿತಾಮಹ ಹಾಗೂ ಹಳಕಟ್ಟಿ ಅವರನ್ನು ಕನ್ನಡದ ಮ್ಯಾಕ್ಸ್ ಮುಲ್ಲರ್ ಎಂದು ಕರೆಯಲಾಗುತ್ತದೆ. ಅವರು ವೃತ್ತಿಯಲ್ಲಿ ವಕೀಲರಾಗಿದ್ದರೂ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ತಮ್ಮ ಇಡೀ ಜೀವನವನ್ನು ವಚನ ಸಾಹಿತ್ಯದ ಸೇವೆಗೆ ಮುಡಿಪಾಗಿಟ್ಟಿದ್ದರು ಎಂದು ಬಣ್ಣಿಸಿದರು.

ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎನ್.ಟಿ. ಎರ್ರಿಸ್ವಾಮಿ ಮಾತನಾಡಿ, ಫ.ಗು. ಹಳಕಟ್ಟಿಯವರ ಜನ್ಮ ದಿನವನ್ನು ರಾಜ್ಯ ಸರ್ಕಾರ ವಚನ ದಿನಾಚರಣೆಯನ್ನಾಗಿ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ವಕೀಲರಾಗಿ ಸಾಕಷ್ಟು ಸಂಪಾದಿಸಬಹುದಿತ್ತು. ಆದರೆ ಫ.ಗು. ಹಳಕಟ್ಟಿಯವರು ತಾವು ಗಳಿಸಿದ ಆಸ್ತಿ ಮಾರಿ 175 ವಚನ ಕೃತಿಗಳನ್ನು ಪ್ರಕಟಿಸಿ ವಚನ ಸಾಹಿತ್ಯದ ಸೇವೆ ಮಾಡಿದರು. 1956 ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು ಎಂದು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಕೆ. ಸುಜಾತಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ರೂಪಕಲಾ, ಗೌರಮ್ಮ, ಡಿ.ಸಿ. ಮಲ್ಲಿಕಾರ್ಜುನ್. ಬಿ.ಎನ್.ಎಮ್. ಸ್ವಾಮಿ, ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ಎಸ್. ಚಿದಾನಂದ್ ಇತರರಿದ್ದರು.

# ಹಿಂದೂ ಧರ್ಮದ ರಕ್ಷಣೆ ಅತ್ಯಗತ್ಯ : ರಂಭಾಪುರಿ ಶ್ರೀ




ರಾಣೇಬೆನ್ನೂರು, ಜು. 6 - ದ್ವೈತ - ಅದ್ವೈತ, ಶಕ್ತಿ ವಿಶಿಷ್ಟ ಅದ್ವೈತಗಳನ್ನು ಆದಿ ರೇಣುಕ ಜಗದ್ಗುರುಗಳು ಸ್ಥಾಪಿಸಿದರು. ಆದರೆ ಅವರ ಬದಲಾಗಿ ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರ, ಮಧ್ವಾಚಾರ್ಯರ ಉಲ್ಲೇಖ ಮಾಡಲಾಗುತ್ತಿದೆ ಎಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಸೋಮೇಶ್ವರ ಭಗವತ್ಪಾದರು ನುಡಿದರು.

ಇಲ್ಲಿಗೆ ಸಮೀಪದ ಫತ್ತೇಪುರ ಗ್ರಾಮದಲ್ಲಿ ಮಂಗಳವಾರ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ವೀರ ಆಂಜನೇಯ ದೇವಸ್ಥಾನದ ಉದ್ಘಾಟನೆ, ಪುರ ಪ್ರವೇಶ, ಪುಣ್ಯಕೋಟಿ ಮಠದ ಬಾಲ ಜಗದೀಶ್ವರ ಸ್ವಾಮಿಗಳ ಮೌನ ಅನುಷ್ಠಾನ ಮಂಗಲ ಹಾಗೂ ಧರ್ಮ ಜಾಗೃತಿ ಸಭೆಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಪ್ರಸ್ತುತ ಕಾಲಘಟ್ಟದಲ್ಲಿ ಹಿಂದೂ ಧರ್ಮದ ರಕ್ಷಣೆ ಅತ್ಯಗತ್ಯವಾಗಿದೆ. ಧರ್ಮಾಭಿಮಾನಿಗಳಿಗೆ ದೇಶಾಭಿಮಾನ ಬರುತ್ತದೆ. ಬಾಲ ಜಗದೀಶ್ವರ ಸ್ವಾಮಿಗಳು ಮೌನ ಅನುಷ್ಠಾನ ಮಾಡಿದ ಜಾಗದ ರೇಣುಕರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು. ಅದಕ್ಕೆ ಅಗತ್ಯ ನೆರವನ್ನು ಶ್ರೀ ರಂಭಾಪುರಿ ಪೀಠದಿಂದ ಒದಗಿಸಲಾಗುವುದು ಎಂದರು.

ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಮಾತನಾಡಿ, ಇತ್ತೀಚಿನ ಕೆಲವು ಸಂಶೋಧನೆಗಳ ಪ್ರಕಾರ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಗೋವಿನ ಉತ್ಪನ್ನಗಳು ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. ನಾವೆಲ್ಲರೂ ಗೋಮಾತೆಯನ್ನು ಪೂಜ್ಯ ಭಾವನೆಯಿಂದ ಕಾಣಬೇಕು. ಇಂದಿನ ದಿನಗಳಲ್ಲಿ ಹಿಂದೂ ಧರ್ಮ, ಸಂಸ್ಕೃತಿ ಅವನತಿಯತ್ತ ಸಾಗುತ್ತಿದೆ. ಈ ನಿಟ್ಟಿನಲ್ಲಿ ಹಿಂದೂಗಳೆಲ್ಲರೂ ಧರ್ಮದ ರಕ್ಷಣೆಗೆ ಕಟಿಬದ್ಧರಾಗಬೇಕಾಗಿದೆ ಎಂದರು.

ಮಣಕೂರಿನ ಮಲ್ಲಿಕಾರ್ಜುನ ಶಿವಾಚಾರ್ಯರು, ರಾಣೇಬೆನ್ನೂರು ಶನೈಶ್ವರ ಮಂದಿರದ ಶ್ರೀ ಶಿವಯೋಗಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು.

ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಕೆ.ಎನ್. ಕೋರಧಾನ್ಯಮಠ, ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ, ಹಾವೇರಿ ಬಿಇಒ ಎಂ.ಎಚ್.ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಇದಕ್ಕೂ ಪೂರ್ವದಲ್ಲಿ ಗ್ರಾಮಕ್ಕೆ ಪ್ರಥಮ ಬಾರಿಗೆ ಆಗಮಿಸಿ ರಂಭಾಪುರಿ ಜಗದ್ಗುರುಗಳನ್ನು ಗ್ರಾಮಸ್ಥರು ಭಕ್ತಿಪೂರ್ವಕವಾಗಿ ಬರ ಮಾಡಿಕೊಂಡರು. ಮೆರವಣಿಗೆ ನಂತರ ರಂಭಾಪುರಿ ಶ್ರೀಗಳು ಪುಣ್ಯಕೋಟಿ ಮಠದ ಶ್ರೀ ಬಾಲ ಜಗದೀ ಶ್ವರ ಸ್ವಾಮಿಗಳ ಮೌನ ಅನುಷ್ಠಾನದ ಮಂಗಲ ಕಾರ್ಯ ನೆರವೇರಿಸಿದರು. ಅದಾದ ಮೇಲೆ ನೂತನವಾಗಿ ನಿರ್ಮಿಸಲಾದ ವೀರ ಆಂಜನೇಯ ದೇವಸ್ಥಾನದ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದರು.

# ರಾಜ್ಯಸಭೆಗೆ ವೀರೇಂದ್ರ ಹೆಗ್ಗಡೆ ನಾಮಕರಣ

(1ನೇ ಪುಟದಿಂದ) ಹೆಗ್ಗಡೆ ಅವರನ್ನು ಅಭಿನಂದಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರೋಗ್ಯ, ಶಿಕ್ಷಣ, ಸ್ತ್ರೀಶಕ್ತಿ, ಗ್ರಾಮೀಣಾಭಿವೃದ್ಧಿ ಹಾಗೂ ವಿವಿಧ ಆಯಾಮಗಳ ಜನಜೀವನದಲ್ಲಿ ಸಕಾರಾತ್ಮಕ ಬೆಳವಣಿಗೆಗೆ ಶ್ರಮಿಸುತ್ತಿರುವ ಹೆಗ್ಗಡೆಯವರ ಅನುಭವ ಸಂಸತ್ತಿನ ಕಲಾಪಗಳ ಸತ್ವ ಹೆಚ್ಚಿಸಲಿದೆ ಎಂದಿದ್ದಾರೆ.

ಅವರನ್ನು ರಾಜ್ಯಸಭೆ ನಾಮನಿರ್ದೇಶನಕ್ಕೆ ಶಿಫಾರಸ್ಸು ಮಾಡಿದ ಪ್ರಧಾನಿ ಮೋದಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುವುದಾಗಿಯೂ ಹೇಳಿದ್ದಾರೆ. ವೈವಿಧ್ಯಮಯ ವಲಯಗಳಲ್ಲಿ ಸಾಧನೆ ಮಾಡಿರುವ ಭಾರತೀಯರನ್ನು ಗುರುತಿಸಿ ಅವರಿಗೆ ಮಾನ್ಯತೆ ನೀಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನಾಮನಿರ್ದೇಶನಗೊಂಡ ಸದಸ್ಯರಲ್ಲಿ ಮಹಿಳೆ, ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯದವರು ಸೇರಿರುವುದಾಗಿಯೂ ಮೂಲಗಳು ತಿಳಿಸಿವೆ.

ಹೆಗ್ಗಡೆ ಅವರು ಗ್ರಾಮೀಣಾಭಿವೃದ್ಧಿ ಹಾಗೂ ಸ್ವ ಉದ್ಯೋಗ ವಲಯದಲ್ಲಿ ಸಮಾಜಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ಪಯ್ಯೋಳಿ ಎಕ್ಸ್‌ಪ್ರೆಸ್ ಎಂದೇ ಹೆಸರಾಗಿರುವ ಉಷಾ ಅವರು, ಅಂತರರಾಷ್ಟ್ರೀಯ ವಲಯದಲ್ಲಿ ಭಾರತಕ್ಕೆ ಹಲವಾರು ಪದಕಗಳನ್ನು ತಂದು ಕೊಟ್ಟಿದ್ದಾರೆ. ಹಲವಾರು ರಾಷ್ಟ್ರೀಯ ಹಾಗೂ ಏಷಿಯಾ ದಾಖಲೆಗಳನ್ನು ಅವರು ಮುರಿದಿದ್ದಾರೆ.

ತಮಿಳುನಾಡಿನ ಮಧುರೈನ ದಲಿತ ಕುಟುಂಬದವರಾದ ಇಳಯರಾಜ, ದೇಶದ ಶ್ರೇಷ್ಠ ಸಂಗೀತ ರಚನೆಕಾರರಲ್ಲಿ ಒಬ್ಬರಾಗಿದ್ದಾರೆ. ಏಳು ದಶಕಗಳ ಸಂಗೀತ ಜೀವನದಲ್ಲಿ ಅವರು 7 ಸಾವಿರಕ್ಕೂ ಹೆಚ್ಚು ಹಾಡುಗಳಿಗೆ ಸಂಗೀತ ನೀಡಿದ್ದಾರೆ.

ಪ್ರಸಾದ್ ಅವರು 'ಬಾಹುಬಲಿ' ಹಾಗೂ 'ಆರ್.ಆರ್.ಆರ್.' ಸೇರಿದಂತೆ ಹಲವಾರು ಜನಪ್ರಿಯ ಚಿತ್ರಗಳಿಗೆ ಕಥೆಗಳನ್ನು ರಚಿಸಿದ್ದಾರೆ. ಅವರು ಬರೆದ ಕಥೆಗಳನ್ನು ಆಧರಿಸಿದ ಚಿತ್ರಗಳು ದೇಶದ ಗಡಿಗಳನ್ನು ದಾಟಿ ಯಶಸ್ಸು ಕಂಡಿವೆ.

# ಎ-ಖಾತೆ ಕೊಡಲು ನಿರ್ಧಾರ

(1ನೇ ಪುಟದಿಂದ) ರಾಜ್ಯಾದ್ಯಂತ ಕುಡಿಯುವ ನೀರು ಒದಗಿಸಲು 9335 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ತಯಾರಿಸಿದ್ದು, ಇದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ ಎಂದು ಭೈರತಿ ಬಸವರಾಜ್ ಹೇಳಿದರು.

ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬೇಕು ಎಂಬ ಉದ್ದೇಶದಿಂದ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸುವ, ಮತ್ತಿತರ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದ ಅವರು, ಆ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಮಗೆ ಅಗತ್ಯವಾದ ಸಂಪನ್ಮೂಲವನ್ನು ತಾವೇ ಸೃಷ್ಟಿಸಿಕೊಳ್ಳಬೇಕು ಎಂಬುದು ಸರ್ಕಾರದ ಉದ್ದೇಶ ಎಂದರು.

# ಡೋಸ್ ಅಂತರ ಇಳಿಸಿದ ಕೇಂದ್ರ

(1ನೇ ಪುಟದಿಂದ) ಡೋಸ್ ಅನ್ನು ನೀಡಲು ನಿರ್ಧರಿಸಲಾಗಿದೆ ಎಂದು ರಾಜ್ಯಗಳಿಗೆ ಬರೆದ ಪತ್ರದಲ್ಲಿ ಸಚಿವಾಲಯ ತಿಳಿಸಿದೆ.

60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಫಲಾನುಭವಿಗಳಿಗೆ ಹಾಗೂ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರಿಗೆ 2ನೇ ಡೋಸ್ ಪಡೆದು 6 ತಿಂಗಳ ನಂತರ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಉಚಿತ ವಾಗಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುವುದು ಎಂದು ತಿಳಿಸಲಾಗಿದೆ.

# ಹರಪನಹಳ್ಳಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ತಳವಾರ ಚಂದ್ರಪ್ಪ



ಹರಪನಹಳ್ಳಿ, ಜು. 6- ತಾಲ್ಲೂಕಿನ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ತಳವಾರ ಚಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾಧ್ಯಕ್ಷ ಎಸ್.ಸತ್ಯನಾರಾಯಣ ಘೋಷಣೆ ಮಾಡಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ತಿಳಿಸಿದರು.

ಉಪಾಧ್ಯಕ್ಷರಾಗಿ ಎ. ನಾಗೇಂದ್ರಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ದೇವೇಂದ್ರಪ್ಪ, ಖಜಾಂಚಿಯಾಗಿ ಎಂ. ಸುರೇಶ್, ಕಾರ್ಯದರ್ಶಿಯಾಗಿ ಎನ್.ರವಿ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದಂತೆ ಎಲ್ಲಾ ಸದಸ್ಯರು ನಿರ್ದೇಶಕರಾಗಿ ಮುಂದುವರೆಯಲಿದ್ದಾರೆ ಎಂದು ಹೇಳಿದರು.

ಜಿಲ್ಲಾ ಸಮಿತಿ ಉಪಾಧ್ಯಕ್ಷ ಉಜ್ಜಿನಿ ರುದ್ರಪ್ಪ, ಬಿ. ರಾಮಪ್ರಸಾದ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ, ಕಾರ್ಯದರ್ಶಿ ವೆಂಕಟೇಶ ನಾಯಕ, ಖಜಾಂಚಿ ಜೋಷಿ, ಹಿರಿಯ ಪತ್ರಕರ್ತ ಎಚ್.ಎ. ಸುರೇಂದ್ರಬಾಬು, ಬಿ.ಮಾಧವರಾವ್, ಕೆ. ಉಚ್ಚೆಂಗೆಪ್ಪ, ಟಿ.ಬಿ. ರಾಜು ಅಲಮರಸಿಕೇರಿ, ಕರಿಬಸಪ್ಪ ಪರಶೆಟ್ಟಿ, ಡಿ. ವಿಶ್ವನಾಥ, ನಾಗರಾಜ ನಾಯ್ಕ, ಕೆ. ಬಸವರಾಜ, ಪರಶುರಾಮ, ಎ. ವೆಂಕಟರಾಜು, ಹೆಚ್. ದೇವರಾಜ, ಬದ್ದಿ ಮಂಜುನಾಥ, ಸೋಮಶೇಖರ್, ಸೇರಿದಂತೆ ಇತರರು ಇದ್ದರು.

# ಕೊಟ್ಟೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಕೊಟ್ರೇಶ್ ಅಧ್ಯಕ್ಷ



ಕೊಟ್ಟೂರು, ಜು.6- ತಾಲ್ಲೂಕಿನ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕೊರವರ ಕೊಟ್ರೇಶ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಬದ್ದಿ ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ವಿಜಯನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪಿ. ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ಈ ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಡಿ. ಸಿದ್ದಪ್ಪ, ಖಜಾಂಚಿಯಾಗಿ ಎಸ್. ಪ್ರಕಾಶ್, ಸಹಕಾರ್ಯದರ್ಶಿಯಾಗಿ ಎಚ್. ನಾಗರಾಜ್ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಪಿ. ಸತ್ಯನಾರಾಯಣ, ಉಪಾಧ್ಯಕ್ಷ ಉಜ್ಜಿನಿ ರುದ್ರಪ್ಪ, ಲಕ್ಷ್ಮಣ್, ಜೋಷಿ, ವೆಂಕಟೇಶ್, ಕೊಟ್ಟೂರು ತಾಲ್ಲೂಕಿನ ಹಿರಿಯ ಪತ್ರಕರ್ತರಾದ ಜಿ. ಸೋಮಶೇಖರ್, ದೇವರಮನಿ ಸುರೇಶ್, ಕೆ.ಎಂ. ಚಂದ್ರಶೇಖರ್, ಎಸ್.ಎಂ. ಗುರುಪ್ರಸಾದ್, ರವಿ, ಸಿ. ಕೊಟ್ರೇಶ್, ಹರ್ಷವರ್ಧನ್, ವಿಜಯ್ ಇತರರಿದ್ದರು.

# ನಗರದಲ್ಲಿ ಇಂದು-ನಾಳೆ ಶಿಕ್ಷಣದಲ್ಲಿ ರಂಗಕಲೆ ಕಾರ್ಯಾಗಾರ

ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ನೇತೃತ್ವದಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 9.30 ರಿಂದ ಶಿಕ್ಷಣದಲ್ಲಿ ರಂಗ ಕಲೆ ಕಾರ್ಯಾಗಾರ ನಡೆಯಲಿದೆ. ಕಾರ್ಯಕ್ರಮವನ್ನು ಪ್ರೊ. ವೈ. ವೃಷಭೇಂದ್ರಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ರುದ್ರೇಶ್ ಎನ್.ಎಸ್., ಮುರುಗೇಶಿ ಕೆ. ಆಗಮಿಸುವರು. ಪ್ರಾಚಾರ್ಯೆ ಡಾ. ಎ.ಜೆ. ನೀತಾ ಅಧ್ಯಕ್ಷತೆ ವಹಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸಾಸ್ವೆಹಳ್ಳಿ ಸತೀಶ್, ಅಣ್ಣಪ್ಪ ಒಂಟಮಾಳಗಿ ಭಾಗವಹಿಸುವರು.

# ನಗರದಲ್ಲಿ ನಾಳೆ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ, ಜು. 6 - ನಗರದ ಸಂತ ಪೌಲರ ಶೈಕ್ಷಣಿಕ ಸಂಸ್ಥೆಯ ಹಳೆ ವಿದ್ಯಾರ್ಥಿಗಳ ಸಂಘವು ಸಂಸ್ಥೆಯ ಅಮೃತ ಮಹೋತ್ಸವದ ಆಚರಣೆಯ ಅಂಗವಾಗಿ ಎಸ್.ಎಸ್. ಕೇರ್ ಟ್ರಸ್ಟ್‌ನ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಾಡಿದ್ದು ದಿನಾಂಕ 8 ಮತ್ತು 9ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಸಂತ ಪೌಲರ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿ ಏರ್ಪಡಿಸಿದೆ.

ಶಿಬಿರವನ್ನು ಎಸ್.ಎಸ್. ಕೇರ್ ಟ್ರಸ್ಟ್ ಟ್ರಸ್ಟಿ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸುವರು ಎಂದು ಸಂತ ಪೌಲರ ಶೈಕ್ಷಣಿಕ ಸಂಸ್ಥೆಯ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಶಿಬಿರದಲ್ಲಿ ಜೆ.ಜೆ.ಎಂ. ಆಸ್ಪತ್ರೆ ಮತ್ತು ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಪರಿಣಿತ ವೈದ್ಯರುಗಳಿಂದ ಸಾಮಾನ್ಯ ಆರೋಗ್ಯ ತಪಾಸಣೆ, ಉಚಿತ ರಕ್ತದಲ್ಲಿನ ಸಕ್ಕರೆ ಪರೀಕ್ಷೆ ಮತ್ತು ರಕ್ತದೊತ್ತಡ ತಪಾಸಣೆ, ಮಧುಮೇಹ ರೋಗಿಗಳಿಗೆ ಸಮಾಲೋಚನೆ, ರೆಟಿನೋಪತಿ ಮತ್ತು ಪಾದದ ಸಮಸ್ಯೆಗಳಿಗೆ ತಪಾಸಣೆ. ಮಧುಮೇಹ ರೆಟಿನೋಪತಿ ಹೊಂದಿರುವ ರೋಗಿಗಳಿಗೆ ಚಿಕಿತ್ಸೆ, ರಕ್ತದೊತ್ತಡ ರೋಗಿಗಳೊಂದಿಗೆ ಸಮಾಲೋಚನೆ ಮತ್ತು ಅಗತ್ಯವಿರುವಲ್ಲಿ ಇಸಿಜಿ, ಸ್ಕ್ರೀನಿಂಗ್. ಸ್ತ್ರೀ ರೋಗ ತಜ್ಞರಿಂದ ಉಚಿತ ಸಮಾಲೋಚನೆ, ಸ್ತನ ಗಡ್ಡೆಗಾಗಿ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆಯವರೆಗೆ ಚಿಕಿತ್ಸೆ, ಗರ್ಭಕಂಠದ ಕ್ಯಾನ್ಸರ್ ಸ್ಕ್ರೀನಿಂಗ್ ಮತ್ತು ಶಸ್ತ್ರ ಚಿಕಿತ್ಸೆಯವರೆಗೆ ಚಿಕಿತ್ಸೆ, ಕ್ಯಾಟರ್ಯಾಕ್ಟ್ ಮತ್ತು ಗ್ಲಾಕೋಮಾ ಸ್ಕ್ರೀನಿಂಗ್, ಬಾಯಿಯ ಆರೋಗ್ಯ ಸಮಸ್ಯೆಗಳಿಗೆ ತಪಾಸಣೆ. ಬಾಯಿ ಕ್ಯಾನ್ಸರ್‌ಗೆ ತಪಾಸಣೆ, ಸಾಮಾನ್ಯ ಚರ್ಮದ ಸಮಸ್ಯೆಗಳಿಗೆ ಸಿಳೆನಿಂಗ್ ಮತ್ತು ಚಿಕಿತ್ಸೆಯನ್ನು ಉಚಿತವಾಗಿ ನಡೆಯಲಿದೆ.

# ಬಣ್ಣದ ಲೋಕದಲ್ಲಿ ಮುಳುಗಿದ ಚಿಣ್ಣರ ಚಿಲಿಪಿಲಿ



ದಾವಣಗೆರೆ, ಜು. 6 - ನಗರದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳಿಗೆ ವರ್ಣಮಯ ಚಟುವಟಿಕೆ ಆಯೋಜಿಸಲಾಗಿತ್ತು. ಮಕ್ಕಳು ಕೇಸರಿ, ಕೆಂಪು ಮತ್ತು ನೀಲಿ ಬಣ್ಣದ ಉಡುಗೆಗಳಿಂದ ಕಂಗೊಳಿಸುತ್ತಿದ್ದರು. ಈ ಚಟುವಟಿಕೆಗೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ವಿವಿಧ ವಿಭಾಗದ ಪ್ರಾಂಶುಪಾಲರುಗಳು, ಬೋಧಕ-ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಭ್ರಮದಿಂದ ಪಾಲ್ಗೊಂಡಿದ್ದರು.


# ಕೇಂದ್ರ ಸಂಪುಟಕ್ಕೆ ನಕ್ವೀ, ಸಿಂಗ್ ರಾಜೀನಾಮೆ

**ಬಿಜೆಪಿಯಲ್ಲೀಗ ಒಬ್ಬ ಮುಸ್ಲಿಂ ಸಂಸದನೂ ಇಲ್ಲ**

ನವದೆಹಲಿ ಜು. 6 – ಕೇಂದ್ರ ಸಚಿವರಾದ ಮುಕ್ತಾರ್ ಅಬ್ಬಾಸ್ ನಕ್ವಿ ಹಾಗೂ ಆರ್.ಸಿ.ಪಿ. ಸಿಂಗ್ ಅವರು ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ರಾಜ್ಯಸಭಾ ಅವಧಿ ಮುಗಿಯುವ ಮುನ್ನಾ ದಿನ ಉಭಯರು ರಾಜೀನಾಮೆ ನೀಡಿದ್ದಾರೆ.

ಉಭಯರ ರಾಜ್ಯ ಸಭಾ ಅವಧಿ ಗುರುವಾರ ಅಂತ್ಯವಾಗಲಿದೆ. ನಕ್ವಿ ಬಿಜೆಪಿಯ ಏಕೈಕ ಮುಸ್ಲಿಂ ಸಚಿವರಾಗಿದ್ದರು. ಸಂಸತ್ತಿನ ಉಭಯ ಸದನಗಳಲ್ಲಿ ಬಿಜೆಪಿ 400ರಷ್ಟು ಸದಸ್ಯರನ್ನು ಹೊಂದಿದ್ದು, ಇದರಲ್ಲಿ ಒಬ್ಬರು ಮುಸ್ಲಿಂ ಇರುವುದಿಲ್ಲ. ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಗಳಲ್ಲಿ ನಕ್ವಿಗೆ ಟಿಕೆಟ್ ನೀಡಿರಲಿಲ್ಲ. ಅವರನ್ನು ಉಪ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆ ಮಾಡುವ ಮಾತುಗಳು ಕೇಳಿ ಬರುತ್ತಿವೆ. ಆಗಸ್ಟ್ 6ರಂದು ಉಪ ರಾಷ್ಟ್ರಪತಿ ಸ್ಥಾನದ ಚುನಾವಣೆ ನಡೆಯಲಿದೆ.

# ಮಲೇಬೆನ್ನೂರು; ಅಂಗಡಿಗಳ ಮೇಲೆ ದಾಳಿ: 15 ಕೆ.ಜಿ. ಪ್ಲಾಸ್ಟಿಕ್ ವಶ



ಮಲೇಬೆನ್ನೂರು, ಜು. 6 - ಜುಲೈ 1 ರಿಂದ ಏಕ ಬಳಕೆಯ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಸಂಪೂರ್ಣವಾಗಿ ನಿಷೇಧಿಸಿರುವ ಹಿನ್ನೆಲೆಯಲ್ಲಿ ಬುಧವಾರ ಪಟ್ಟಣದ ವಿವಿಧ ಅಂಗಡಿಗಳ ಮೇಲೆ ದಾಳಿ ಮಾಡಿ ಪುರಸಭೆ ಅಧಿಕಾರಿಗಳು 15 ಕೆ.ಜಿ. ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ. ಅಲ್ಲದೆ, ನಿಷೇಧದ ಆದೇಶವಿದ್ದರೂ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಅಂಗಡಿಗಳ ಮಾಲೀಕರಿಂದ 1600 ರೂ. ದಂಡ ವಸೂಲಿ ಮಾಡಿದ್ದಾರೆ.

ಇನ್ನು ಮುಂದೆ ಪುರಸಭೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಕಂಡು ಬಂದರೆ ಅಂತವರ ಅಂಗಡಿ ಲೈಸೆನ್ಸ್ ರದ್ದು ಮಾಡುವುದಾಗಿ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಎಚ್ಚರಿಕೆ ನೀಡಿದ್ದಾರೆ. ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಶಿವರಾಜ್ ಹಾಗೂ ಸಿಬ್ಬಂದಿ ವರ್ಗದವರು ದಾಳಿಯಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ಇಂದು ಬಯಲಾಟ

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಂದ ಇಂದು ಸಂಜೆ 5.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಬಯಲಾಟ (ದೊಡ್ಡಾಟ) ಪ್ರದರ್ಶನ ಮತ್ತು ಗ್ರಾಮೀಣ ಕಲಾವಿದರುಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಯರಗುಂಟೆಯ ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಮಠದ ಶ್ರೀ ಪರಮೇಶ್ವರ ಮಹಾಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ಹೆಚ್. ಕೆ. ಸತ್ಯಭಾಮ ಉದ್ಘಾಟಿಸುವರು. ಎಂ. ಬಸವರಾಜ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಎಸ್. ಟಿ. ವೀರೇಶ್, ರವಿಚಂದ್ರ, ದಿಳ್ಳೆಪ್ಪ, ಶ್ರೀಮತಿ ವಿನೋದ ಅಜಗಣ್ಣನವರ್, ಶಿವಪ್ಪ ಎನ್. ಆಗಮಿಸುವರು.


ಶ್ರೀ ಅಕ್ಕಮಹಾದೇವಿ ಸಮಾಜ (ರಿ)
ಶ್ರೀ ಅಕ್ಕಮಹಾದೇವಿ ಹೊಲಿಗೆ ಶಾಲೆ
ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಹೊಲಿಗೆ ತರಬೇತಿ ಶಾಲೆಗೆ ಪ್ರವೇಶ ಪ್ರಕಟಣೆ

ಶ್ರೀ ಅಕ್ಕಮಹಾದೇವಿ ಸಮಾಜದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಅಕ್ಕಮಹಾದೇವಿ ಹೊಲಿಗೆ ಶಾಲೆ 2022-23ನೇ ಶೈಕ್ಷಣಿಕ ವರ್ಷಕ್ಕೆ ಪ್ರಾರಂಭವಾಗಿರುತ್ತದೆ. ಅರ್ಹ ಹಾಗೂ ಆಸಕ್ತಿಯುಳ್ಳ ಮಹಿಳೆಯರಿಂದ ಪ್ರವೇಶ ದಾಖಲಾತಿ ಪ್ರಾರಂಭವಾಗಿದೆ. ಗೃಹಿಣಿಯರು ಬಿಡುವಿನ ವೇಳೆಯಲ್ಲಿ ಹೊಲಿಗೆ ತರಬೇತಿ ಪಡೆಯಲು ಸುವರ್ಣಾವಕಾಶವಿರುತ್ತದೆ. ವಯೋಮಿತಿ ಕಡ್ಡಾಯವಿರುವುದಿಲ್ಲ. ವೃತ್ತಿ ತರಬೇತಿ ಪಡೆದು ಸ್ವಉದ್ಯೋಗಸ್ಥೆ ಆಗುವ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಲು ಅವಕಾಶವಿರುತ್ತದೆ. ಬೆಳಿಗ್ಗೆ 10 ರಿಂದ ಸಂಜೆ 4ರ ವರೆಗೆ ತರಬೇತಿ ಶಾಲೆ ತೆರೆದಿರುತ್ತದೆ. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿರಿ

– ಕಾರ್ಯದರ್ಶಿ

## ಎ. ವೇಲುಸ್ವಾಮಿ ನಿಧನ



ದಾವಣಗೆರೆ ಶೇಖರಪ್ಪ ನಗರ 'ಎ' ಬ್ಲಾಕ್ ವಾ
ಕಾಂಗ್ರೆಸ್ ಮುಖಂಡರೂ, ಕಲಾವಿದರೂ ಆದ

**ಎ.ವೇಲುಸ್ವಾಮಿ**

**ದಿನಾಂಕ 6.7.2022ರಂದು ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 7.7.2022ರ ಗುರುವಾರ ಮಧ್ಯಾಹ್ನ 3.30ಕ್ಕೆ ಆವರಗೆರೆ ಉತ್ತಮ್‌ಚಂದ್ ಲೇಔಟ್ ಹತ್ತಿರದ ರುದ್ರಭೂಮಿಯಲ್ಲಿ ನೆರವೇರಲಿದೆ.**


ಇಂತಿ ದುಃಖತಪ್ತರು

**99641-31342, 90080-80144**

# ಖಾದ್ಯ ತೈಲ ಬೆಲೆ ಇಳಿಸಲು ಸೂಚನೆ

(1ನೇ ಪುಟದಿಂದ) ತೈಲ ಮಾರಾಟ ಕಂಪನಿಗಳು ತಿಳಿಸಿವೆ. ಇಡೀ ದೇಶದಲ್ಲಿ ಒಂದೇ ಬ್ರಾಂಡ್‌ನ ಖಾದ್ಯ ತೈಲ ಬೆಲೆ ಒಂದೇ ರೀತಿ ಇರುವಂತೆ ನೋಡಿಕೊಳ್ಳುವಂತೆಯೂ ಸುಧಾಂಶು ತಿಳಿಸಿದ್ದಾರೆ. ಪ್ರಸಕ್ತ ಬೇರೆ ಬೇರೆ ವಲಯಗಳಲ್ಲಿ ಬೆಲೆಗಳಲ್ಲಿ 3-5 ರೂ.ಗಳ ವ್ಯತ್ಯಾಸ ಇದೆ.

## ಚಿರಸ್ಮರಣೆ




**ಮಹಾದೇವಪ್ಪ** (ನೀರಾವರಿ ಇಲಾಖೆ)

ನೀವು ನಮ್ಮನ್ನಗಲಿ ಇಂದಿಗೆ 22 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮಕ್ಕಳಾದ


**ಟಿ.ಎಂ. ಕುಬೇರಪ್ಪ ಟಿ. ಈರಪ್ಪ ಮತ್ತು ಟಿ.ಎಂ. ಬಸವರಾಜ ಹಾಗೂ ಮೊಮ್ಮಕ್ಕಳು ಮತ್ತು ಬಂಧುಗಳು ಹಳ್ಳಿಹಾಳ್.**

## ಬಸಾಪುರದ ನಾಗರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ ಪ್ರಹ್ಲಾದ ಇವರ ತಮ್ಮನವರಾದ ಭರಮಪ್ಪರ ನಾಗರಾಜಪ್ಪ (62) ಇವರು ದಿನಾಂಕ 6.7.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.7.2022 ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಬಸಾಪುರದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ದೊಡ್ಡಬಾತಿ ಪೂಜಾರ್ ಮುರಿಗೇಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ ಪೂಜಾರ್ ಸಿದ್ದಜ್ಜನವರ ಮಗ ಪೂಜಾರ್ ಮುರಿಗೇಂದ್ರಪ್ಪ (73) ಇವರು ದಿನಾಂಕ 6.7.2022ರ ಬುಧವಾರ ಮಧ್ಯಾಹ್ನ 4.30 ಕ್ಕೆ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.7.2022 ರ ಗುರುವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗ್ರಾಮ ದೊಡ್ಡಬಾತಿಯ ರುದ್ರಭೂಮಿಯಲ್ಲಿ ನೆರವೇರಲಿದೆ.

# ನಾಮಫಲಕಕ್ಕೆ ಬೈಕ್ ಡಿಕ್ಕಿ : ಸವಾರ ಸಾವು

**ಬೆಣ್ಣೆಹಳ್ಳಿ**

ಜಗಳೂರು, ಜು.6 - ಬೈಕ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದಲ್ಲಿದ್ದ ನಾಮಫಲಕಕ್ಕೆ ಡಿಕ್ಕಿಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಜಗಳೂರು ತಾಲ್ಲೂಕಿನ ಬೆಣ್ಣೆಹಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50 ರ ಕ್ರಾಸ್ ಬಳಿ ಮಂಗಳವಾರ ಸಂಜೆ ಸಂಭವಿಸಿದೆ.

ಕಲ್ಲೇದೇವರಪುರ ಗ್ರಾಮದ 18 ವರ್ಷದ ಯಶವಂತ್ ಮೃತ ಯುವಕನಾಗಿದ್ದು, ಈತ ದೊಣ್ಣೆಹಳ್ಳಿ ಕಡೆಯಿಂದ ಕಲ್ಲೇದೇವರಪುರ ಗ್ರಾಮದ ಕಡೆಗೆ ಹೋಗುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ. ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಚಾರ ಸಂಕಿರಣಗಳಿಂದ ಕೌಶಲ್ಯತೆ ಹೆಚ್ಚಳ

## ಬಿಐಇಟಿಯ 'ಕೆಮೆಕ್ಸಲ್-2022' ವಿಚಾರ ಸಂಕಿರಣದಲ್ಲಿ ಡಾ.ರಘುರಾಜ್ ಕೆ.ರಾವ್




ದಾವಣಗೆರೆ, ಜು.6- ಕಾಲೇಜುಗಳಲ್ಲಿ ನಡೆಸುವ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಕೌಶಲ್ಯತೆ ಹೆಚ್ಚಾಗುತ್ತದೆ ಎಂದು ಬೆಂಗಳೂರಿನ ಅಕ್ವಾ ಟೆಕ್ ಪ್ರೈ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರೂ, ಅಕ್ವಾ ಅಲ್ಲೋಯಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕರೂ ಆದ ಡಾ.ರಘುರಾಜ್ ಕೆ. ರಾವ್ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ವಿಶ್ವೇಶ್ವರಾಯ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 'ಕೆಮೆಕ್ಸಲ್-2022' ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕೆಮಿಕಲ್ ವಿಭಾಗದ ವಿದ್ಯಾರ್ಥಿಗಳಿಗೆ ಈ ರಾಷ್ಟ್ರಮಟ್ಟದ ವಿಚಾರ ಸಂಕಿರಣವು ತಮ್ಮ ಮುಂದಿನ ಭವಿಷ್ಯಕ್ಕೆ ಬುನಾದಿಯಾಗಿದೆ. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳೂ ಸಹ ಇಲ್ಲಿ ಪಾಲ್ಗೊಳ್ಳುವುದರಿಂದ ಪರಸ್ಪರ ಸಮಾಲೋಚಿಸಲು ಸಹಕಾರಿಯಾಗಿದೆ ಎಂದರು.

ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆಯು ನಾಯಕತ್ವದ ಗುಣ, ಧನಾತ್ಮಕ ಚಿಂತನೆ ಬೆಳೆಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸದ್ವಿನಿಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಬಿಐಇಟಿ ಮೆಕ್ಯಾನಿಕಲ್ ವಿಭಾಗದ ಪ್ರೊ. ಕೆ.ಸದಾಶಿವಪ್ಪ ಮಾತನಾಡಿ, ಎಂಜಿನಿಯರಿಂಗ್ ಮಾಡಿದ ಎಲ್ಲಾ ವಿದ್ಯಾರ್ಥಿಗಳು ಸಾಮಾನ್ಯವಾಗಿ ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಉದ್ಯೋಗಿಗಳಾಗುವುದಕ್ಕಿಂತ ಸ್ವಂತ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗದಾತರಾಗಲು ಪ್ರಯತ್ನಿಸಬೇಕು ಎಂದು ಕಿವಿ ಮಾತು ಹೇಳಿದರು.

ಸಮಯ ಪಾಲನೆ ತಿಳಿಯದ ವಿದ್ಯಾರ್ಥಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಸಮಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಸದಾ ಸಂಶೋಧನಾ ಮನೋಭಾವ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಆಯೋಜಕ ಡಾ.ಸಿ.ಎಂ. ಕಲ್ಲೇಶಪ್ಪ ಮಾತನಾಡುತ್ತಾ, ವಸ್ತುಗಳ ಬೇಡಿಕೆ, ವಿನ್ಯಾಸ, ಉತ್ಪಾದನೆ, ಸಾರಿಗೆ, ಮಾರುಕಟ್ಟೆ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ರಾಜ್ಯದ ವಿವಿಧ ಭಾಗಗಳಿಂದ 27 ಓರಲ್ ಹಾಗೂ 17 ಪೋಸ್ಟರ್‌ಗಳನ್ನು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪ್ರಸ್ತುತ ಪಡಿಸಲಿದ್ದಾರೆ. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಪ್ರತಿ ವರ್ಷವೂ ಕಾರ್ಯಾಗಾರ ಆಯೋಜಿಸಲಾಗುತ್ತಿದ್ದು, ಇದು 20ನೇ ಕಾರ್ಯಾಗಾರವಾಗಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಡಾ.ಜಿ.ಪಿ. ದೇಸಾಯಿ, ಡಾ.ಪ್ರವೀಣ್ ಕುಮಾರ್ ಡಿ.ಜಿ., ಸಂಕೇತ್ ಉಪಸ್ಥಿತರಿದ್ದರು. ಚೈತ್ರ ಹಾಗೂ ಆಯ್ಕಾ ರೈ ನಿರೂಪಿಸಿದರು. ಶುಭಂ, ಪ್ರಕಾಶ್ ತೀರ್ಥ ಹಾಗು ನಿಧಿ ಪ್ರಾರ್ಥಿಸಿದರು. ಆಶಾ ವಂದಿಸಿದರು

# ಹೊಸ ಆವಿಷ್ಕಾರ ಅಳವಡಿಸಿದರೆ ಹೆಚ್ಚಿನ ಆರ್ಥಿಕ ಸೌಲಭ್ಯ ನೀಡಬಹುದು: ಎನ್.ಎ. ಮುರುಗೇಶ್



ದಾವಣಗೆರೆ, ಜು.6- ಸಹಕಾರಿ ಸಂಘಗಳು, ಬ್ಯಾಂಕ್‌ಗಳಲ್ಲಿ ಮತ್ತಷ್ಟು ಹೊಸ ಆವಿಷ್ಕಾರ ಅಳವಡಿಸಿಕೊಂಡರೆ ಸದಸ್ಯರು, ಗ್ರಾಹಕರಿಗೆ ಆರ್ಥಿಕ ಸೌಲಭ್ಯಗಳ ಅವಕಾಶವನ್ನು ಯಶಸ್ವಿಯಾಗಿ ನೀಡಬಹುದಾಗಿದೆ ಎಂದು ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಎನ್.ಎ. ಮುರುಗೇಶ್ ತಿಳಿಸಿದರು.

ನಗರದ ಸಹಕಾರ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸಹಕಾರ ಇಲಾಖೆ, ಜಿಲ್ಲಾ ಸಹಕಾರ ಒಕ್ಕೂಟ ಇವುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಇತರೆ ಸಹಕಾರ ಸಂಘಗಳ ನಿರ್ದೇಶಕರುಗಳಿಗೆ ಹಾಗೂ ಅಧಿಕಾರಿ, ಸಿಬ್ಬಂದಿ ವರ್ಗದವರಿಗೆ ಹಮ್ಮಿಕೊಂಡಿದ್ದ ವಿಶೇಷ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದ್ದು, ನೆಟ್ ಮತ್ತು ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ ಕಾಣಲಾಗುತ್ತಿದೆ. ಗ್ರಾಹಕರು ಬ್ಯಾಂಕ್ ಬಳಿ ಬರುವ ಪ್ರಮೇಯವೇ ಇಲ್ಲವಾಗಿದ್ದು, ಕೂತಲ್ಲೇ ಬ್ಯಾಂಕಿಂಗ್ ಸೇವೆ ಪಡೆಯುತ್ತಿದ್ದಾರೆ. ಅಲ್ಲದೇ ಸೈಬರ್ ಕೇಂದ್ರಗಳಲ್ಲೂ ಬ್ಯಾಂಕಿಂಗ್ ಸೇವೆ ಸಿಗುವಂತಾಗಿದೆ ಎಂದು ಹೇಳಿದರು. ಕೇಂದ್ರದ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ನೀಡುವ ಹಣಕಾಸಿನ ನೆರವನ್ನು ನೇರವಾಗಿ ಗ್ರಾಹಕರ ಖಾತೆಗೆ ವರ್ಗಾವಣೆ ಮಾಡುವ ಅವಕಾಶವನ್ನು ಸಹಕಾರ ಬ್ಯಾಂಕ್ ಗಳಿಗೆ ನೀಡುವುದಾಗಿ ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಹೇಳಿರುವುದು ಸಂತಸ ತಂದಿದೆ. ಅವರೂ ಸಹ ಸಹಕಾರ ಕ್ಷೇತ್ರದಿಂದಲೇ ಬಂದಿರುವುದರಿಂದ ಸಹಕಾರ ಕ್ಷೇತ್ರದ ಅಳಿವು-ಉಳಿವು ಅವರಿಗೆ ಗೊತ್ತಿದೆ. ಹಾಗಾಗಿ ಸಹಕಾರ ಸಂಘ, ಬ್ಯಾಂಕುಗಳನ್ನು ಬಲಪಡಿಸಲು ಪ್ರಗತಿಗೆ ಶ್ರಮಿಸಲಿದ್ದಾರೆ. ಮುಂದಿನ ದಿನಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಲಿದ್ದಾರೆ ಎಂದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಆರ್.ಜಿ. ಶ್ರೀನಿವಾಸಮೂರ್ತಿ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಸಾಲ ವಸೂಲಾತಿ ಮತ್ತು ಸಾಲ ಪತ್ರಗಳ ದಾಖಲಾತಿ ಬಹಳ ಮುಖ್ಯ. ಈ ಬಗ್ಗೆ ತರಬೇತಿ ನೀಡುತ್ತಿರುವುದು ಸಹಕಾರ ಬ್ಯಾಂಕ್, ಸಂಘಗಳ ಪ್ರಗತಿಗೆ ಪೂರಕವಾಗಿದೆ. ಆರ್ ಬಿಐನ ಕೆಲ ಕಠಿಣ ನಿರ್ಬಂಧಗಳಿಂದ ಇದಕ್ಕೆ ಒಳಪಡುವ ಸಹಕಾರ ಸಂಸ್ಥೆಗಳು ಮುನ್ನಡೆಯಲು ಕಷ್ಟವಾಗುತ್ತಿದೆ. ಹಾಗಾಗಿ ಸಹಕಾರ ಸಂಸ್ಥೆಗಳ ಕಷ್ಟ-ಸುಖ ನೋಡಿಕೊಂಡು ಸಹಕಾರ ನೀಡಬೇಕೆಂದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರ ಬ್ಯಾಂಕುಗಳ ಏಳಿಗೆಗೆ ಅವುಗಳ ಕಾರ್ಯದರ್ಶಿ, ಆಡಳಿತ ಮಂಡಳಿ ಕಾರ್ಯವೈಖರಿ ಬಹುಮುಖ್ಯ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಧಾರವಾಡದ ಸಹಕಾರ ಸಂಘಗಳ ನಿವೃತ್ತ ಸಹಾಯಕ ನಿಬಂಧಕ ಸುರೇಶ್ ಜಿ. ಜೋಶಿ ಸಾಲ ದಾಖಲಾತಿ ಪತ್ರಗಳು ಹಾಗೂ ಸಾಲ ವಸೂಲಾತಿ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಆಡಳಿತ ಮಂಡಳಿಯ ನಿರ್ದೇಶಕರುಗಳಾದ ಎಸ್.ಬಿ. ಶಿವಕುಮಾರ್, ಬಿ. ಶೇಖರಪ್ಪ, ಎನ್. ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಹೆಚ್. ಸಂತೋಷ್ ಕುಮಾರ್, ವ್ಯವಸ್ಥಾಪಕ ಕೆ.ಎಂ. ಜಗದೀಶ್ ಸೇರಿದಂತೆ, ಇತರರು ಇದ್ದರು.

ಕೆ.ಎಸ್. ಶ್ವೇತಾ ಪ್ರಾರ್ಥಿಸಿದರು. ರಂಗನಾಥ್ ವಂದಿಸಿದರು.

# ಕನ್ಹಯ್ಯಲಾಲ್ ಹತ್ಯೆ ಖಂಡಿಸಿ ಹೊನ್ನಾಳಿಯಲ್ಲಿ ಪ್ರತಿಭಟನೆ




ಹೊನ್ನಾಳಿ,ಜು.6- ಟೈಲರ್ ಕನ್ಹಯ್ಯಲಾಲ್ ಹತ್ಯೆ ಮಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಪ್ರಾಣ ಬೆದರಿಕೆ ಹಾಕಿದವರನ್ನು ಬಂಧಿಸಿದರೆ ಸಾಲದು, ಅವರನ್ನು ಗುಂಡಿಕ್ಕಿ ಕೊಲ್ಲಬೇಕು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ತಾಲ್ಲೂಕು ಬಿಜೆಪಿ ವತಿಯಿಂದ ಕನ್ಹಯ್ಯಲಾಲ್ ಹತ್ಯೆ ಖಂಡಿಸಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ತನಗೆ ಜೀವ ಬೆದರಿಕೆ ಇದೆ ಎಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರೂ, ಅವರು ಅದನ್ನ ಗಂಭೀರ ವಾಗಿ ತೆಗೆದುಕೊಳ್ಳಲಿಲ್ಲ. ಕನ್ಹಯ್ಯಲಾಲ್ ಹತ್ಯೆಗೆ ಕಾಂಗ್ರೆಸ್ ಸರ್ಕಾರವೇ ನೇರ ಕಾರಣ, ರಾಷ್ಟ್ರಪತಿಗಳು ರಾಜಸ್ತಾನ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತ ಜಾರಿ ಮಾಡುವಂತೆ ಆಗ್ರಹಿಸಿದರು.

ಹಿರೇಕಲ್ಮಠ ನಿವಾಸದಲ್ಲಿರುವ ಶಾಸಕರ ಮನೆಯಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ತಾಲ್ಲೂಕು ಕಚೇರಿವರೆಗೆ ಮೆರವಣಿಗೆ ನಡೆಸಿದ ಶಾಸಕರು ತಹಶೀಲ್ದಾರ್ ರಶ್ಮಿ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶಾಂತರಾಜ್ ಪಟೇಲ್ ಮತ್ತು ಶಿವಾನಂದ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸಿ.ಕೆ.ರವಿ, ಪುರಸಭೆ ಅಧ್ಯಕ್ಷ ರಂಗಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಕಷ್ಟಪಡದೆ ಇಷ್ಟಪಟ್ಟು ಓದಲು ಡಾ. ಶಿವಕುಮಾರ ಹೊನ್ನಾಳಿ ಕರೆ



ರಾಣೇಬೆನ್ನೂರು, ಜು. 6 - ತಾಲ್ಲೂಕಿನ ಹಂಸ ಬಾವಿಯ ರೂರಲ್ ಪಾಲಿ ಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಇಂಡಕ್ಷನ್ ಪ್ರೋಗ್ರಾಂ ನ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಡಾ. ಶಿವಕುಮಾರ ಹೊನ್ನಾಳಿ ಮಾತನಾಡಿ, ಕಷ್ಟಪಡದೇ ಇಷ್ಟಪಟ್ಟು ಓದಿದರೆ ಉತ್ತಮ ಬದುಕು ಕಟ್ಟಿಕೊಳ್ಳಬಹುದು ಎಂದು ಹೇಳಿದರು.

ವಯಸ್ಸಿನ ಗುಣಧರ್ಮಕ್ಕೆ ತಕ್ಕಂತೆ ಮನಸ್ಸನ್ನು ಹರಿಬಿಡದೇ ಸೃಜನಾತ್ಮಕ, ಕ್ರಿಯಾತ್ಮಕ ಕಾರ್ಯಗಳಿಗೆ ಆದ್ಯತೆ ನೀಡಿ, ಓದಿದ ಸಂಸ್ಥೆಯ, ಓದಿಸಿದ ತಂದೆ-ತಾಯಿಯರ, ಕಲಿಸಿದ ಗುರುಗಳ ಪ್ರೀತಿ ಪಾತ್ರರಾಗಿರಿ ಎಂದು ಡಾ.ಶಿವಕುಮಾರ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಪ್ರಾಚಾರ್ಯ ಶಿವಕುಮಾರ ಚನ್ನವೀರಗೌಡ ಅಧ್ಯಕ್ಷತೆ ವಹಿಸಿದ್ದರು

# ರಸ್ತೆ ದುರಸ್ತಿಗೆ ಆಗ್ರಹಿಸಿ ಸಾಲಕಟ್ಟೆ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಮಲೇಬೆನ್ನೂರು, ಜು. 6 - ಸಾಲಕಟ್ಟೆಯಿಂದ ದೇವರಬೆಳಕೆರೆಗೆ ಹೋಗುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸಂಚಾರಕ್ಕೆ ತೀವ್ರ ತೊಂದರೆ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳು ಗ್ರಾ.ಪಂ. ಕಛೇರಿ ಎದುರು ಪ್ರತಿಭಟನೆ ನಡೆಸಿದ ಘಟನೆ ಬುಧವಾರ ಸಾಲಕಟ್ಟೆಯಲ್ಲಿ ನಡೆದಿದೆ.

ಗ್ರಾಮದಿಂದ ಪ್ರತಿನಿತ್ಯ ಸುಮಾರು 30ರಿಂದ 40 ವಿದ್ಯಾರ್ಥಿಗಳು ದೇವರಬೆಳಕೆರೆಯಲ್ಲಿರುವ ಪ್ರೌಢಶಾಲೆಗೆ ಓಡಾಡುತ್ತಿದ್ದಾರೆ. ಈಗ ಮಳೆಗಾಲ ಆಗಿರುವುದರಿಂದ ಈ ರಸ್ತೆ ಗುಂಡಿ ಬಿದ್ದು ಓಡಾಡುವುದಕ್ಕೆ ಬಹಳ ತೊಂದರೆಯಾಗಿದ್ದು, ಸಂಬಂಧ ಪಟ್ಟ ಇಲಾಖೆಯವರು ಕೂಡಲೇ ರಸ್ತೆ ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ವಿದ್ಯಾರ್ಥಿಗಳನ್ನು ಸಮಾಧಾನಪಡಿಸಿದ ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಿಡಿಓ ಈ ಬಗ್ಗೆ ಗ್ರಾ.ಪಂ. ಸಭೆಯಲ್ಲಿ ಚರ್ಚೆ ಮಾಡಿ, ತಾತ್ಕಾಲಿಕವಾಗಿ ರಸ್ತೆಯನ್ನು ಅಭಿವೃದ್ಧಿ ಪಡಿಸುವುದಾಗಿ ಭರವಸೆ ನೀಡಿದ್ದಾರೆಂದು ವಕೀಲ ಮಂಜುನಾಥ್ ತಿಳಿಸಿದ್ದಾರೆ.



# ಲಂಕಾದಲ್ಲಿ ರಾಜಕೀಯ ಬಿಕ್ಕಟ್ಟು ಸಚಿವ ಡಿಸಿಲ್ವಾ ರಾಜೀನಾಮೆ

ಕೊಲಂಬೊ, ಜು. 6 – ಆರ್ಥಿಕ ಬಿಕ್ಕಟ್ಟಿನಲ್ಲಿರುವ ಶ್ರೀಲಂಕಾದಲ್ಲಿ ಈಗ ರಾಜಕೀಯ ಬಿಕ್ಕಟ್ಟು ಕಾಣಿಸಿಕೊಂಡಿದೆ. ವಿಮಾನಯಾನ ಸಚಿವ ನಿಮಲ್ ಸಿರಿಪಾಲ ಡಿಸಿಲ್ವಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಜಪಾನ್ ಟೈಸೈ ಕಾರ್ಪೊರೇಷನ್ ಕಂಪನಿಯಿಂದ ಡಿಸಿಲ್ವಾ ಲಂಚ ಕೇಳಿದ್ದಾರೆ ಎಂದು ಪ್ರತಿಪಕ್ಷವಾದ ಎಸ್.ಜೆ.ಬಿ ನಾಯಕ ಸಜಿತ್ ಪ್ರೇಮದಾಸ ಆರೋಪಿಸಿದ್ದರು.

ನಂತರ ರಾಜೀನಾಮೆ ನೀಡಿರುವ ಡಿಸಿಲ್ವಾ, ನಿಷ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡುವ ಸಲುವಾಗಿ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಇನ್ನೋರ್ವ ಸಚಿವ ಧಮ್ಮಿಕ ಪೆರೇರ, ಪ್ರಧಾನ ಮಂತ್ರಿ ರಾಣಿಲ್ ವಿಕ್ರಮಸಿಂಘೆ ಅವರು ಹಣಕಾಸು ಖಾತೆಗೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ದೇಶಕ್ಕೆ ಡಾಲರ್ ಹರಿವು ಬರುವುದನ್ನು ವಿಕ್ರಮಸಿಂಘೆ ತಡೆಯುತ್ತಿದ್ದಾರೆ. ವಿದೇಶ ವಿನಿಮಯ ಬಿಕ್ಕಟ್ಟು ಬಗೆಹರಿಸಲು ಅವರ ಬಳಿ ಯಾವುದೇ ಯೋಜನೆ ಇಲ್ಲ ಎಂದು ಪೆರೇರ ಆರೋಪಿಸಿದ್ದಾರೆ.

## ಕ್ರಿಪ್ಟೋ ಸಾಲ ಕಂಪನಿ ವೊಯೇಜರ್ ದಿವಾಳಿ

ಟೊರಂಟೊ, ಜು. 6 – ಕ್ರಿಪ್ಟೋ ಸಾಲ ನೀಡುವ ಕಂಪನಿಯಾದ ವೊಯೇಜರ್ ಡಿಜಿಟಲ್ ದಿವಾಳಿಯಾಗಿದೆ. ಕಳೆದ ವಾರವಷ್ಟೇ ತನ್ನಲ್ಲಿರಿಸಲಾದ ಠೇವಣಿಗಳು ಹಾಗೂ ವಹಿವಾಟಿನ ಮೇಲೆ ಕಂಪನಿ ನಿರ್ಬಂಧ ಹೇರಿತ್ತು.

ವೊಯೇಜರ್ ಕಂಪನಿಯು ಲಕ್ಷಕ್ಕೂ ಹೆಚ್ಚು ಸಾಲಿಗರನ್ನು ಹೊಂದಿದೆ. ಅದರ ಆಸ್ತಿ ಹಾಗೂ ನೀಡಿರುವ ಸಾಲಗಳು 10 ಶತಕೋಟಿ ಡಾಲರ್‌ಗಳವರೆಗೆ ಇದೆ ಎನ್ನಲಾಗಿದೆ. ಕಳೆದ ಮೇ ತಿಂಗಳಲ್ಲಿ ಟೆರಾಯುಎಸ್‌ಡಿ ಕ್ರಿಪ್ಟೋ ಕುಸಿದ ನಂತರ ಈ ವಲಯದಲ್ಲಿ ತೀವ್ರ ಏರಿಳಿತ ಉಂಟಾಗುತ್ತಿದೆ. ವಾಲ್ಡ್ ಹಾಗೂ ಸೆಲ್ಸಿಯಸ್ ನೆಟ್‌ವರ್ಕ್ ರೀತಿಯ ಕೆಲ ಕಂಪನಿಗಳು ಕ್ರಿಪ್ಟೋ ವಹಿವಾಟಿಗೆ ತಡೆ ಹಾಕಿವೆ. ಇದರಿಂದಾಗಿ ಹೂಡಿಕೆದಾರರಿಗೆ ತೀವ್ರ ಸಮಸ್ಯೆಗಳು ಎದುರಾಗಿವೆ.

# ಕುಣೆಬೆಳಕೆರೆಯ ಅತಿಕ್ರಮಣ ಜಮೀನು ತೆರವು



ಹರಿಹರ, ಜು. 6 - ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದ ಸರ್ವೇ ನಂ 148/2 ರ 2 ಎಕರೆ 31 ಗುಂಟೆ ಅತಿಕ್ರಮಣವಾಗಿದ್ದ ಜಮೀನನ್ನು, ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನಿರ್ದೇಶನದಂತೆ ಸರ್ಕಾರದ ಸುಪರ್ದಿಗೆ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು ಎಂದು ತಹಶೀಲ್ದಾರ್ ಎಂ. ಬಿ ಅಶ್ವತ್ಥ್ ಹೇಳಿದರು.

ಮೈಸೂರು ಸಂಸ್ಥಾನದ 1956-57 ಸಾಲಿನ ಆಡಳಿತ ಸಮಯದಲ್ಲಿ ಮೂಲ ವಾರಸುದಾರ ಜಗದೀಶಪ್ಪ ಎಂಬುವವರು ಜಮೀನನ್ನು ದಾನವಾಗಿ ನೀಡಿದ್ದರು. ತದನಂತರ ಅವರೇ ಜಮೀನನ್ನು ಉಳುಮೆ ಮಾಡುಕೊಂಡು ಬಂದಿದ್ದಾರೆ. ಕ್ರಮೇಣ ಇವರು ಮರಣವನ್ನು ಹೊಂದಿದರು. ಇವರ ಹೆಸರಲ್ಲೇ ಜಮೀನು ಇದ್ದ ಕಾರಣ ಮಕ್ಕಳು ಮತ್ತು ಪತ್ನಿ ಕಮಲಮ್ಮ ಹೆಸರಿಗೆ ಪೌತಿ ಖಾತೆ ಮಾಡಿಕೊಂಡಿದ್ದರು ಎಂದವರು ಹೇಳಿದ್ದಾರೆ. ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನಿರ್ದೇಶನದಂತೆ ಭೂದಾನ ಜಮೀನನ್ನು ಸರ್ಕಾರದ ಸುಪರ್ದಿಗೆ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ಮಂಜುನಾಥ್, ಸಿ.ಆರ್.ಪಿ. ತಿಪ್ಪೇಸ್ವಾಮಿ, ಮುಖ್ಯ ಶಿಕ್ಷಕ ನಿಂಗಪ್ಪ, ಎಸ್.ಡಿ.ಎಂ.ಸಿ. ಅಧ್ಯಕ್ಷೆ ಸುಧಾ, ಸದಸ್ಯರಾದ ಶಿಲ್ಪ, ಚಿಕ್ಕಪ್ಪ, ಗ್ರಾಮಲೆಕ್ಕಾಧಿಕಾರಿ ದೇವರಾಜ್, ರಾಜಸ್ವ ನಿರೀಕ್ಷಕ ಹೆಚ್.ಎಲ್. ಆನಂದ್, ಮಲೇಬೆನ್ನೂರು ಉಪ ತಹಶೀಲ್ದಾರ್ ಆರ್. ರವಿ ಮತ್ತಿತರರು ಉಪಸ್ಥಿತರಿದ್ದರು.

# ಕೂಲಿಕಾರ್ಮಿಕರಿಗೆ ವಾರಕ್ಕೊಮ್ಮೆ ಕೂಲಿ ನೀಡಿ



**ಜಗಳೂರು**

ಜಗಳೂರು, ಜು. 6- ಕೂಲಿಕಾರ್ಮಿಕರು ಕಷ್ಟಕ್ಕೆ ಮನರೇಗಾ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದು, ಜಾಬ್ ಕಾರ್ಡ್ ಸಮಸ್ಯೆ ಸೇರಿದಂತೆ ಬೇಡಿಕೆಗಳಿಗೆ ಅಲೆದಾಡಿಸದೆ ಕೂಡಲೇ ಬಗೆಹರಿಸಬೇಕು. ಕಾಮಗಾರಿ ಸ್ಥಳದಲ್ಲಿ ಕುಡಿಯುವ ನೀರು, ಪ್ರಥಮ ಚಿಕಿತ್ಸೆ, ನೆರಳು ಸೇರಿದಂತೆ ವ್ಯವಸ್ಥೆಯನ್ನು ಪಿಡಿಓ ಕೂಡಲೇ ಕಲ್ಪಿಸಬೇಕು ಎಂದು ನೋಡೆಲ್ ಅಧಿಕಾರಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಸೂಚಿಸಿದರು.

ತಾಲ್ಲೂಕಿನ ಮುಸ್ಟೂರು ಗ್ರಾಮ ಪಂಚಾಯಿತಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2022-23 ನೇ ಸಾಲಿನ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದರು.

ಕೂಲಿ ಕಾರ್ಮಿಕರಿಗೆ ಪ್ರತಿವಾರ ಕೂಲಿ ಹಣ ಪಾವತಿಸಿ ಹಾಗೂ ಕಾಮಗಾರಿ ಸ್ಥಳದಲ್ಲಿ ಸುರಕ್ಷತಾ ಕಿಟ್ ಕುಡಿಯುವ ನೀರಿನ ವ್ಯವಸ್ಥೆಯನ್ನು ಪಿಡಿಓ ಕೂಡಲೇ ಕಲ್ಪಿಸಬೇಕು ಎಂದು ತಿಳಿಸಿದರು.

ಲೆಕ್ಕಪರಿಶೋಧಕ ಷಣ್ಮುಖಪ್ಪ ಮಾಹಿತಿ ನೀಡಿ, ಮುಸ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ 2022-23ನೇ ಸಾಲಿನಲ್ಲಿ ಕಳೆದ 6 ತಿಂಗಳಲ್ಲಿ ನಡೆಸಿದ ಮನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಗುಣಮಟ್ಟ, ಎಂಬಿ ಯಲ್ಲಿರುವಂತೆ ಅಳತೆಯ ಪ್ರಕಾರ ಪರಿಶೀಲನೆಗಾಗಿ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಲಾಗುತ್ತಿದೆ ಎಂದರು.

ಕೂಲಿಕಾರ್ಮಿಕರು ಕೆಲಸನಿರತ ವೇಳೆ ಅಕಾಲಿಕ ಸಾವು, ನೋವುಗಳಾದರೆ 25 ಸಾವಿರ ಪರಿಹಾರ ಹಣ ನೀಡಲಾಗುವುದು ಎಂದರು.

**ಕಾರ್ಮಿಕರ ದೂರು:** ಗ್ರಾಮದ 80 ಕ್ಕೂ ಅಧಿಕ ಕೂಲಿಕಾರ್ಮಿಕರು ಮನರೇಗಾದಡಿ ಕೆಲಸ ಮಾಡುತ್ತಿದ್ದು.

ಒಂದು ವಾರ ಕಳೆದರೂ ಕೂಲಿ ಹಣ ಜಮಾ ಆಗಿಲ್ಲ. ಕುಡಿಯುವ ನೀರು, ನೆರಳು, ಪ್ರಥಮ ಚಿಕಿತ್ಸೆ ಕಿಟ್ ವಿತರಿಸಿಲ್ಲ. ಎನ್ ಎಂ ಆರ್ ವಿಳಂಬವಾಗುತ್ತಿದೆ. ಕಂಪ್ಯೂಟರ್ ಆಪರೇಟರ್ ಸರಿಯಾಗಿ ಸ್ಪಂದಿಸುತ್ತಿಲ್ಲ.

ಇಂದಿನ ಗ್ರಾಮ ಸಭೆ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆಯಬೇಕಿತ್ತು. ಕೂಲಿ ಕಾರ್ಮಿಕರಿಗೆ ಸೀಮಿತವಾಗಿದೆ ಎಂದು ಸಾರ್ವಜನಿಕರು, ಕೂಲಿಕಾರ್ಮಿಕರು ಆರೋಪಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಶೃತಿ, ಉಪಾಧ್ಯಕ್ಷೆ ಸಾಕಮ್ಮ, ಪಿಡಿಓ ಸುನಿತಾ , ಸದಸ್ಯ ಮಂಜಪ್ಪ, ಮುಖಂಡರಾದ ಸತೀಶ್ ಸೇರಿದಂತೆ ಕೂಲಿ ಕಾರ್ಮಿಕರು ಭಾಗವಹಿಸಿದ್ದರು.

# ಸಿಇಟಿ/ನೀಟ್ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಸಾಲಕ್ಕಾಗಿ ಅರ್ಜಿ

ದಾವಣಗೆರೆ, ಜು. 6 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗುವ ಸಿಇಟಿ/ನೀಟ್ ಮುಖಾಂತರ, ಎಂ.ಬಿ.ಬಿ.ಎಸ್, ಬಿ.ಡಿ.ಎಸ್, ಬಿ.ಇ, ಬಿ. ಆರ್ಕ್, ಬಿ.ಟೆಕ್, ಮತ್ತು ಬಿ.ಆಯುಷ್ ಕೋರ್ಸ್‌ಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅರಿವು ಸಾಲ ಯೋಜನೆಯಡಿಯಲ್ಲಿ ವಿದ್ಯಾಭ್ಯಾಸ ಸಾಲ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನಿಗಮದ ವೆಬ್‌ಸೈಟ್ kmdconline.karnataka.gov.in ಮೂಲಕ ಅರ್ಜಿ ಸಲ್ಲಿಸಿ, ಹಾರ್ಡ್ ಕಾಪಿಗಳನ್ನು ಹಾಗೂ indemnity bond ಅನ್ನು ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಇದೇ ದಿನಾಂಕ 20 ರೊಳಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ ಜಯದೇವ ಸರ್ಕಲ್ ಹತ್ತಿರ, ಫೋ. 08192232349 ಗೆ ಸಂಪರ್ಕಿಸಬಹುದುದೆಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಬೆಸ್ತ, ಕೋಳಿ, ಕಬ್ಬಲಿಗರಿಗೆ ನೇರ ಸಾಲಕ್ಕೆ ಅರ್ಜಿ

ದಾವಣಗೆರೆ, ಜು.6- ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ ಹಾಗೂ ಅರಿವು ಶೈಕ್ಷಣಿಕ ಸಾಲ (ನವೀಕರಣ)ಯೋಜನೆಗಳ ಅನುದಾನಕ್ಕಾಗಿ ಹಿಂದುಳಿದ ವರ್ಗಗಳ ಪ್ರವರ್ಗ-1ರ 6(ಎ) ರಿಂದ 6(ಎಕೆ) ವರೆಗಿನ ಬೆಸ್ತ, ಕೋಳಿ, ಕಬ್ಬಲಿಗ ಇತ್ಯಾದಿ ಜಾತಿ/ ಉಪಜಾತಿಗೆ ಸೇರಿದ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಲ್ಲಿಸಲು ಇದೇ ದಿನಾಂಕ 14 ಕೊನೆಯ ದಿನಾಂಕವಾಗಿದ್ದು, ಅರ್ಜಿಗಳನ್ನು ಸುವಿಧಾ ತಂತ್ರಾಂಶದ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯನ್ನು ಅಥವಾ ನಿಗಮದ ಸಹಾಯವಾಣಿ ಸಂಖ್ಯೆ: 08192-230934 ಸಂಪರ್ಕಿಸಬಹುದು.

**ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ದಾವಣಗೆರೆ**

ಅಸಲು ದಾವಾ ನಂ. 231/2022

ಅರ್ಜಿದಾರರು : **ಕರ್ನಾಟಕ ಬ್ಯಾಂಕ್**, ಅಣಜಿ ಶಾಖೆ. ವಿರುದ್ಧ ಎದುರುದಾರರು : **ಶ್ರೀ ರೇವಣಸಿದ್ದಪ್ಪ ಎಸ್.ಎಸ್ 2. ಶ್ರೀ ನಾಗರಾಜು ಬಿನ್ ಶೆಟ್ರು ಓಂಕಾರಪ್ಪ** ವಯಸ್ಸು 46 ವರ್ಷ, ವಾಸ: ಅಣಜಿ ಗ್ರಾಮ, ದಾವಣಗೆರೆ ತಾಲ್ಲೂಕು

**ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 2ನೇ ಪ್ರತಿವಾದಿಗೆ ನೋಟಿಸ್**

ಈ ಮೇಲ್ಕಂಡ ದಾವಾವನ್ನು ವಾದಿ ಬ್ಯಾಂಕಿನವರು ನಿಮ್ಮ ವಿರುದ್ಧ ರೂ.1,27,200/-ಗಳ ಹಣ ಮತ್ತು ದಾವಾ ತಾರೀಖಿನಿಂದ ಬಡ್ಡಿ ವಸೂಲಾತಿಗಾಗಿ ಸಲ್ಲಿಸುತ್ತಾರೆ.

ಸದರಿ ದಾವಾದಲ್ಲಿ ಮೇಲ್ಕಂಡ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ: 10-8-2022 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11:00 ಘಂಟೆಗೆ ಹಾಜರಾಗಿ, ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ದಾವಾವನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 5-7-2022 ರಂದು ನೀಡಲಾಗಿದೆ.

ಸಹಿ/- **(ಎಂ.ಎಂ. ಹೆಗಡೆ)**, ವಾದಿ ಪರ ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ,

ಸಹಿ/- **(ಮಾರುತಿ)** ಶಿರಸ್ತೇದಾರರು

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ.

ಸ್ಥಳ : ದಾವಣಗೆರೆ. ದಿನಾಂಕ :

**GOVERNEMENT OF KARNATAKA 33 KARANATAKA BN NCC DAVANGERE**

1. This unit intends to purchase dry ration and condiments for combined TSC Training camp at Davanagere from 20 July to 29 July & 30 to 08 Aug 2022.
2. the interested parties/vendors are requested to submit your lowest quotations by 15 July 2022, Quotation received after due date will not be accepted.
3. 2% TDS of income Tax and 2% TDS of GST is applicable on all procurements by issuing supply order after entering into contact with concerned vendor.
4. 2% TDS of IT will be made when the contract bill value exceeds Rs. 30,000/- on every payment & Rs. 1,00,000/- during the current financial year.
5. 2% TDS of GST will be made when the contract bill value exeeds Rs.250000/- on every single payment.
6. For any details contact this office telephone No. 08192-224417.

No. 0409/Q/Camp/NCC dated 07 July 2022.

*Sd/-* **(S Nandy)** Col Officer, Commanding

**ಶ್ರೀ ಅಕ್ಕಮಹಾದೇವಿ ಸಮಾಜ (ರಿ)**

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಸಾರ್ವಜನಿಕ ಪ್ರಕಟಣೆ**

ನಾವು ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು, ಶ್ರೀಮತಿ ಡಿ. ಸುವರ್ಣಮ್ಮ ಕಾರ್ಯದರ್ಶಿ ಇವರುಗಳು ಸಾರ್ವಜನಿಕರು ಗಮನಕ್ಕೆ ಪ್ರಕಟಿಸುವುದೇನೆಂದರೆ

ಶ್ರೀ ಅಕ್ಕಮಹಾದೇವಿ ಸಮಾಜದ ವಿವಿಧ ಉದ್ಧೇಶಗಳಿಗೆ ಅಂದರೆ ಶ್ರೀ ಅಕ್ಕಮಹಾದೇವಿ ನರ್ಸರಿ ಹಾಗೂ ಶಿಶುಪಾಲನಾ ಕೇಂದ್ರಗಳ ಸ್ಥಳಾವಕಾಶಕ್ಕೆ ದಾವಣಗೆರೆ ನಗರ ಹಾಗೂ ದಾವಣಗೆರೆ ತಾಲ್ಲೂಕು ಹಿರಿಯ ನೋಂದಣಾಧಿಕಾರಿಗಳ ಕಛೇರಿ ಅಧಿಕಾರಕ್ಕೆ ಸೇರಿದ ದಾವಣಗೆರೆ ಸಿಟಿ 2ನೇ ವಾರ್ಡ್, 2ನೇ ಡಿವಿಜನ್, ರಾಜೀವ್‌ಗಾಂಧಿ ಬಡಾವಣೆ (ಮಹಾನಗರ ಪಾಲಿಕೆ ವಲಯ ಕಛೇರಿ ರಸ್ತೆ) ಬರತಕ್ಕ ಖಾಲಿ ನಿವೇಶನ ಸಂಖ್ಯೆ 529 ಹಾಗೂ 530 ಇವುಗಳು ದಾವಣಗೆರೆ ಸಿಟಿ ಜಾಲಿನಗರ 2ನೇ ಮೇನ್, 2ನೇ ಕ್ರಾಸ್, ಡೋರ್ ನಂ. 1841/2 ರಲ್ಲಿ ವಾಸವಾಗಿರುವ ಶ್ರೀಮತಿ ಬಸಮ್ಮ ಕೋಂ. ಇ.ಬಸವರಾಜ ಇವರಿಗೆ ಸೇರಿದ ಸಂಪೂರ್ಣ ಹಕ್ಕುದಾರಿ ಹಾಗೂ ಸ್ವಾಧೀನಾನುಭವದಲ್ಲಿರುವ ಸ್ವತ್ತನ್ನು ಮೇಲೆ ವಿವರಿಸಲಾದ ಉದ್ದೇಶಕ್ಕೆ ಶುದ್ಧ ಕ್ರಯಕ್ಕೆ ಖರೀದಿಸಲು ಉದ್ದೇಶಿಸಿರುತ್ತೇವೆ. ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾದ ಸ್ವತ್ತುಗಳ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ತಂಟೆ-ತಕರಾರುಗಳು, ಆಕ್ಷೇಪಣೆಗಳು, ಹಕ್ಕು-ಬಾಧ್ಯತೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 30 ದಿನದೊಳಗೆ ಲಿಖಿತ ಅರ್ಜಿಯನ್ನು ಮೇಲಿನ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಮಾನ್ಯತೆ ಮಾಡಲಾಗುವುದಿಲ್ಲ.

**ಷೆಡ್ಯೂಲ್**

ದಾವಣಗೆರೆ ಜಿಲ್ಲಾ ಹಾಗೂ ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳವರ ಕಛೇರಿ ಅಧಿಕಾರಕ್ಕೆ ಬರುವ ದಾವಣಗೆರೆ ಸಿಟಿ 2ನೇ ವಾರ್ಡ್, 2ನೇ ಡಿವಿಜನ್, (ಮಹಾನಗರ ಪಾಲಿಕೆ ವಲಯ ಕಛೇರಿ ರಸ್ತೆ) ರಾಜೀವ್‌ಗಾಂಧಿ ಬಡಾವಣೆ ಇಲ್ಲಿ ಬರತಕ್ಕ ಸೈಟ್ ನಂ. 529 ಇದರ ಅಳತೆ ಪೂರ್ವ-ಪಶ್ಚಿಮ 20 ಅಡಿ, ಉತ್ತರ-ದಕ್ಷಿಣ 30 ಅಡಿ ಮತ್ತು ಸೈಟ್ ನಂ. 530 ಇದರ ಅಳತೆ ಪೂರ್ವ-ಪಶ್ಚಿಮ 20 ಅಡಿ, ಉತ್ತರ-ದಕ್ಷಿಣ 30 ಅಡಿಗಳು

**ಸೈಟ್ ನಂ. 529ಕ್ಕೆ ಚಕ್ಕುಬಂದಿ**

ಪೂರ್ವಕ್ಕೆ : ನಿವೇಶನ ನಂ. 530 ಉತ್ತರಕ್ಕೆ : ನಿವೇಶನ ನಂ. 542

ಪಶ್ಚಿಮಕ್ಕೆ : ನಿವೇಶನ ನಂ. 528 ದಕ್ಷಿಣಕ್ಕೆ : ರಸ್ತೆ

**ಸೈಟ್ ನಂ. 530ಕ್ಕೆ ಚಕ್ಕುಬಂದಿ**

ಪೂರ್ವಕ್ಕೆ : ನಿವೇಶನ ನಂ. 531 ಉತ್ತರಕ್ಕೆ : ರಸ್ತೆ

ಪಶ್ಚಿಮಕ್ಕೆ : ನಿವೇಶನ ನಂ. 529 ದಕ್ಷಿಣಕ್ಕೆ : ರಸ್ತೆ

**ಕೆ.ಕೆ ಸುಶೀಲಮ್ಮ** ಅಧ್ಯಕ್ಷರು

**ಡಿ.ಸುವರ್ಣಮ್ಮ** ಕಾರ್ಯದರ್ಶಿ


# ಕೃಷಿ ಕ್ಷೇತ್ರಕ್ಕೆ ತಮ್ಮನ್ನೇ ಅರ್ಪಿಸಿಕೊಂಡಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇಲೇಸು" ಎಂಬ ಮಾತು ಕನ್ನಡದ ಒಂದು ಪ್ರಸಿದ್ಧ ನಾಣ್ನುಡಿ. ಇದು ಕೃಷಿಗೆ ಸಂಬಂಧಿಸಿದ ಮಾತು. ಕೃಷಿ ಕಾರ್ಯವಿಲ್ಲವಾದರೆ ಜನರಿಗೆ ಆಹಾರ ಸಮಸ್ಯೆ ಆಗುವುದು ನಿಶ್ಚಿತ. ಬಹುಷ್ಯ ಹಾಗಾಗಿಯೇ ಕೃಷಿ ಕಾರ್ಯ ಎಲ್ಲಾ ವಿದ್ಯೆಗಳಿಗಿಂತ ಹೆಚ್ಚಿನದು ಎಂದು ಹೇಳಿರಬೇಕು. ಅನ್ನ, ಆಹಾರ ಇಲ್ಲದೆ ಮನುಷ್ಯನಿಗೆ ಶಕ್ತಿ ಬರುವುದಿಲ್ಲ. ಆದುದರಿಂದಲೇ "ಅನ್ನತೋ ಪ್ರಾಣಃ ಪ್ರಾಣತೋ ಪರಾಕ್ರಮಃ" ಎಂಬ ಮಾತು ರೂಢಿಯಲ್ಲಿದೆ. ಪ್ರತಿಯೊಂದು ಜೀವಿಗೂ ಜೀವ ಉಳಿಸಿಕೊಳ್ಳಲು ಆಹಾರವೇ ಮೂಲ ಸಾಧನ. ಆದುದರಿಂದಲೇ ಕೃಷಿಗೆ ಮಹತ್ವ ಬಂದಿರುವುದು. ಇಂತಹ ಕೃಷಿಯ ಕಾರ್ಯಕ್ಕೆ ಆರು ದಶಕಗಳಿಗೂ ಹೆಚ್ಚು ಕಾಲ ತಮ್ಮನ್ನು ತಾವು ಅರ್ಪಿಸಿಕೊಂಡವರೇ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಚರಪಟ್ಟಾಧ್ಯಕ್ಷರಾಗಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು.

ಪ್ರಸ್ತುತ ದಿನಮಾನಗಳಲ್ಲಿ ಶಿಕ್ಷಣವು ವಾಣಿಜ್ಯೀಕರಣ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದಿನ ಕಾಲದಲ್ಲಿ ಮಠಗಳಲ್ಲಿ ನಡೆಯುತ್ತಿದ್ದ ವಿದ್ಯಾದಾನಕ್ಕೂ ಈಗಿನ ವ್ಯವಸ್ಥೆಗೂ ಭೂಮಿ ಆಕಾಶದಷ್ಟು ಅಂತರವನ್ನು ಕಾಣಬಹುದಾಗಿದೆ. ಮೊದಲು ಮಠಗಳಲ್ಲಿ ಉಚಿತ ಊಟದ ವ್ಯವಸ್ಥೆ ಇರುತಿತ್ತು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಠದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸ್ವಾಮಿಗಳು ಮಾಡಬೇಕಾಗುತ್ತಿತ್ತು. ಆಸ್ತಿ ಇದ್ದರೆ ಅದರಿಂದ ಬರುವ ಆದಾಯದಿಂದ, ಇಲ್ಲವಾದರೆ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗಿ ದವಸ, ಧಾನ್ಯಗಳನ್ನು ಸಂಗ್ರಹಿಸಿಕೊಂಡು ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಅಂತಹ ಒಂದು ಕಾಯಕದಿಂದ ಪ್ರಸಾದ ನಿಲಯದಲ್ಲಿದ್ದ ನೂರಾರು ವಿದ್ಯಾರ್ಥಿಗಳಿಗೆ ಪ್ರಸಾದ ವ್ಯವಸ್ಥೆ ಮಾಡುವುದರಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಶ್ರಮಿಸಿದವರೇ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು.

ಕರ್ನಾಟಕದ ಹೃದಯ ಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠವು 1946ರಲ್ಲಿ ಒಂದು ಪ್ರೌಢಶಾಲೆ ತೆರೆದು ವಿದ್ಯಾಪ್ರಸಾರ ಮಾಡಲು ಶುರು ಮಾಡಿತ್ತು. ಆ ಪ್ರಸಾದ ನಿಲಯದಲ್ಲಿ ಯಾವ ತಾರತಮ್ಯವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೂ ಸಹಪಂಕ್ತಿ ಭೋಜನ ವ್ಯವಸ್ಥೆಯಿತ್ತು. 1962ರಲ್ಲಿ "ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ" ಪ್ರಾರಂಭವಾದ ನಂತರ, ಹದಿನೈದಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಶಾಲಾ- ಕಾಲೇಜುಗಳನ್ನು ತೆರೆಯಿತು. ಮತ್ತು ಅಲ್ಲಿ ಅಧ್ಯಯನ ಮಾಡಲು ಬರುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಲಾಗಿತ್ತು. ಅವೆಲ್ಲವುಗಳಿಗೆ ಬೇಕಾದ ದವಸ, ಧಾನ್ಯದ ವ್ಯವಸ್ಥೆಯನ್ನು ಪೂಜ್ಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು ಆಯಾಯ ಶಾಲಾ-ಕಾಲೇಜುಗಳ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗಿ ಮಾಡುತ್ತಿದ್ದರು.

ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಆಜ್ಞಾರಾಧಕರಾಗಿ ಸುಮಾರು 45 ವರ್ಷಗಳು ಅವರ ಜೊತೆಗೆ ಸಾಗಿ, ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾಗಿ ಕೆಲಸ ಕಾರ್ಯಗಳನ್ನು ಮಾಡಿರುತ್ತಾರೆ. ಹಾಗೆಯೇ ಈಗಿನ ಜಗದ್ಗುರುಗಳಾದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಆಡಳಿತ ಅವಧಿಯಲ್ಲೂ ಅಂದರೆ ಎರಡೂವರೆ ದಶಕಗಳ ಕಾಲ ಕಾರ್ಯ ನಿರ್ವಹಿಸಿದ್ದರು.



ಪೂಜ್ಯರ ಜನ್ಮಶತಮಾನೋತ್ಸವ ನಿಮಿತ್ತ ಈ ಲೇಖನ

ಪೂಜ್ಯರು ಸಿರಿಗೆರೆ ಗ್ರಾಮದಲ್ಲಿ 1922ರ ಜುಲೈ 07ರಂದು ಜನಿಸಿದರು. ಇವರ ಜನ್ಮ ನಾಮ ರೇವಣಸಿದ್ಧಯ್ಯ ಎಂದು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ವನ್ನು ಸ್ವಗ್ರಾಮದಲ್ಲಿಯೇ ಮುಗಿಸಿ ದರು. 19ನೇ ಜಗದ್ಗುರು ಶ್ರೀ ಗುರುಶಾಂತರಾಜ ದೇಶಿ ಕೇಂದ್ರ ಮಹಾಸ್ವಾಮಿಗಳವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಬೀರೂರಿನಲ್ಲಿ ಸಂಸ್ಕೃತ, ವೇದ ವಿದ್ಯಾಭ್ಯಾಸಕ್ಕಾಗಿ ಹೋದರು. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠಕ್ಕೆ ಪಟ್ಟಾಭಿಷಿಕ್ತರಾದ (1940) ನಂತರ ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀ ಸಿದ್ಧಯ್ಯ (ಶ್ರೀಪತಿ ಶರ್ಮ) ಈ ಇಬ್ಬರನ್ನೂ ತಮ್ಮ ಸರ್ಕೀಟ್‌ನಲ್ಲಿ ಜೊತೆಯಲ್ಲಿ ಇಟ್ಟುಕೊಂಡು ಸಂಸ್ಕೃತ ಪಾಠ ಹೇಳಿಕೊಡುತ್ತಿದ್ದರು. ಆಗ ಕೋಲ್ಕೊತ್ತಾದ ಸಂಸ್ಕೃತ ಪರೀಕ್ಷಾ ಕೇಂದ್ರವು ಆಗಿನ ಗುಲ್ಬರ್ಗಾ ಜಿಲ್ಲೆಯ ಯಾದಗಿರಿಯ ಶ್ರೀ ಶಂಕರ ಸಂಸ್ಕೃತ ಪಾಠಶಾಲೆಯಾಗಿತ್ತು. ಈ ಇಬ್ಬರು ಅಲ್ಲಿಗೆ ಹೋಗಿ ಪರೀಕ್ಷೆ ಬರೆದು ಬಂದರು. ಹೆಚ್ಚಿನ ಅಧ್ಯಯನಕ್ಕಾಗಿ ಇವರೀರ್ವರನ್ನು ಕಾಶಿಗೆ ಕಳುಹಿಸಿಕೊಟ್ಟರು. ಒಂದು ವರ್ಷ ಅಲ್ಲಿ ಅಧ್ಯಯನ ಮಾಡಿ, ಕಲ್ಕತ್ತೆಯಲ್ಲಿ ಪರೀಕ್ಷೆ ಬರೆದುಬಂದರು. ಬೇಸಿಗೆ ರಜೆಗೆಂದು ಸಿರಿಗೆರೆಗೆ ಬಂದ ಶ್ರೀ ರೇವಣಸಿದ್ದಯ್ಯನವರು ತಿರುಗಿ ಕಾಶಿಯಲ್ಲಿ ಅಧ್ಯಯನ ಮಾಡಲು ಹೋಗಲಾಗ ಲಿಲ್ಲ. ಆಗ ಮಠದಲ್ಲಿ ಶ್ರೀ ಶಿವ ಕುಮಾರ ಶಿವಾಚಾರ್ಯ ಮಹಾ ಸ್ವಾಮಿ ಗಳವರಿಗೆ ಕಾರ್ಯಬಾಹುಳ್ಯ ಹೆಚ್ಚಾಗಿತ್ತು. ಆದುದರಿಂದ ಶ್ರೀ ರೇವಣಸಿದ್ದಯ್ಯನವರಿಗೆ ಸನ್ಯಾಸ ದೀಕ್ಷೆ ನೀಡಿ, ಶ್ರೀ ಸಂಸ್ಥಾನದ ಚರ ಪಟ್ಟಾಧಿಕಾರವನ್ನು ವಹಿಸಿದರು. ಆಗ ಶ್ರೀ ಮಲ್ಲಿಕಾರ್ಜುನ ಶಿವಾ ಚಾರ್ಯ ಸ್ವಾಮಿಗಳು ಎಂದು ಅಭಿದಾನ ಹೊಂದಿದರು. ಮುಂದೆ ಶ್ರೀಪತಿ ಶರ್ಮರ ಜೊತೆಗೆ ಇನ್ನೂ ನಾಲ್ಕು ಜನರಾದ ವಾಗೀಶ ಶರ್ಮ, ವಿಶ್ವೇಶ್ವರ ಶರ್ಮ, ವಿಶ್ವಕುಮಾರ ಶರ್ಮ ಮತ್ತು ವಾಚಸ್ಪತಿ ಶರ್ಮ ಇವರನ್ನು ಕಾಶಿಗೆ ಅಧ್ಯಯನಕ್ಕಾಗಿ ಕಳುಹಿಸಿ ಕೊಟ್ಟರು. ಇವರಲ್ಲಿ ವಾಗೀಶ ಶರ್ಮ ಎಂಬುವರು 1946 ರ ಬೇಸಿಗೆಯಲ್ಲಿ ಕಾಲರಾ ರೋಗದಿಂದ ಅಲ್ಲಿಯೇ ಶಿವೈಕ್ಯರಾದರು. ಆಗ ಅವರ ಪಾರ್ಥಿವ ಶರೀರರವನ್ನು ಗಂಗಾ ನದಿಯ ದಡದಲ್ಲಿಯೇ ಸಮಾಧಿ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಇವರೆಲ್ಲರ ವಿದ್ಯಾ ಗುರುಗಳಾದ ಶ್ರೀ ಗೌರಿನಾಥ್ ಪಾಠಕ್ ಅವರ ಕಾರ್ಯ ಸ್ತುತ್ಯಾರ್ಹವಾಗಿರುತ್ತದೆ.

ಶ್ರೀ ಸಂಸ್ಥಾನದ ಸಂಪ್ರದಾಯದಂತೆ ದೀಪಾರಾಧನೆ ಕಾಣಿಕೆ ಸಂಗ್ರಹಿಸಲು ಶಿಷ್ಯ ಸಮುದಾಯವಿರುವ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಮೈಸೂರು ಮುಂತಾದ ಭಾಗಗಳಲ್ಲಿ ಎತ್ತಿನ ಗಾಡಿಯಲ್ಲಿ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಸಂಚರಿಸುತ್ತಿದ್ದರು. ವಿರಕ್ತ ಮೂರ್ತಿಗಳಾದ ಶ್ರೀ ಕಾಶಿ ಮಹಾಲಿಂಗಸ್ವಾಮಿಗಳವರು ಚಿತ್ರದುರ್ಗ, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಸಂಚರಿಸಿ ಕಾಣಿಕೆ ಸಂಗ್ರಹಿಸುತ್ತಿದ್ದರು.

ಮಲ್ಲಿಕಾರ್ಜುನ ಶ್ರೀಗಳು ವರ್ಷಾನುಗಟ್ಟಲೆ ಪ್ರವಾಸದಲ್ಲಿಯೇ ಇರುತ್ತಿದ್ದರು. ಸವಾರಿ ಗಾಡಿಯಲ್ಲಿಯೇ. ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಗುಂಡ್ಲುಪೇಟೆ ತಾಲ್ಲೂಕುಗಳವರೆಗೂ ಸಂಚಾರ ಮಾಡಿರುತ್ತಾರೆ. ಕೇರಳದ ಕಾಸರಗೋಡು, ತಮಿಳುನಾಡಿನ ಕೊಯಮತ್ತೂರು ಜಿಲ್ಲೆಗಳಲ್ಲಿ ಮಠದ ಶಿಷ್ಯರಿರುವ ವಿಚಾರ ತಿಳಿದು ಅಲ್ಲಿಗೂ ಹೋಗಬೇಕೆಂಬ ಅಭಿಲಾಷೆ ಹೊಂದಿದ್ದರು. ಆದರೆ ಶ್ರೀ ಜಗದ್ಗುರುಗಳವರ ಅಪ್ಪಣೆ ಮೇರೆಗೆ ಅನಿವಾರ್ಯ ಕಾರಣಗಳಿಂದ ವಾಪಸ್ ಸಿರಿಗೆರೆಗೆ ಹಿಂದುರಿಗಿದರು.

1973ರಿಂದ ಪೂಜ್ಯರು ಪ್ರವಾಸಕ್ಕೆ ಕಾರನ್ನು ಬಳಸಲು ಪ್ರಾರಂಭಿಸಿದರು. ಶಿಷ್ಯರ ಆಹ್ವಾನದ ಮೇರೆಗೆ ಮದುವೆ, ಗೃಹ ಪ್ರವೇಶ, ಶಿವಗಣಾರಾಧನೆ ಮತ್ತು ಇತರೆ ಧಾರ್ಮಿಕ ಸಮಾರಂಭಗಳಲ್ಲಿ ಭಾಗ ವಹಿಸಿ, ಶರಣ ಧರ್ಮ ಪ್ರಸಾರ ಮಾಡುತ್ತಿ ದ್ದರು. ಪೂಜ್ಯರು ಭಾಗವಹಿಸಿದ ಸಮಾರಂಭಗಳಲ್ಲಿ ಲಿಂಗಾಯತ ಧರ್ಮ ಹಾಗೂ ಶರಣರ ವಚನಗಳ ಬಗ್ಗೆ ಆಶೀರ್ವಚನ ನೀಡಿ, ಜನಜಾಗೃತಿ ಮೂಡಿ ಸುತ್ತಿ ದ್ದರು. ವಚನಗಳನ್ನು ಕೇವಲ ಭಾಷಣದಲ್ಲಿ ಉಪ ದೇಶ ಮಾಡಲು ಬಳಸದೆ, ನಿತ್ಯ ಜೀವನದಲ್ಲಿ ಅಳವಡಿಸಿ ಕೊಂಡರೆ, ಸಾರ್ಥಕವಾಗುತ್ತದೆ ಎಂದು ತಿಳಿಸುತ್ತಿದ್ದರು. ಲಿಂಗವಂತ ಧರ್ಮದ ಬಗ್ಗೆ ಉಪದೇಶ ಮಾಡುವವರು ಸ್ವತಃ ಲಿಂಗಧಾರಿಗಳಾಗಿ, ಇತರೆಯವರಿಗೆ ಮಾರ್ಗದರ್ಶನ ಮಾಡಬೇಕೆಂದು ಹೇಳುತ್ತಿದ್ದರು.

ಸಿರಿಗೆರೆಯಲ್ಲಿದ್ದಾಗ ಬೆಳಿಗ್ಗೆ ಮತ್ತು ಸಂಜೆ ತಪ್ಪದೇ ತೋಟಗಳಿಗೆ ಹೋಗಿ ಬರುತ್ತಿದ್ದರು. ಹೊಸದಾಗಿ ಸಸಿಗಳನ್ನು ನೆಟ್ಟಾಗ ಪ್ರತಿಯೊಂದು ಗಿಡದ ಲಾಲನೆ ಪೋಷಣೆಯನ್ನು ನೋಡಿ ಬರುವ ವಾಡಿಕೆಯಿತ್ತು. ತೋಟಗಳಿಗೆ ಜೊತೆಯಲ್ಲಿ ಹೋಗಲು ಕೊನೆಯ ಪಕ್ಷ ಮಠದ ಚಿಕ್ಕ ವಟು, ಸಂಸ್ಥೆಯ ನೌಕರ, ಕೆಲಸದ ಆಳು ಯಾರಿದ್ದರೂ ಸರಿಯೇ ನಡೆದುಕೊಂಡೇ ಹೋಗುತ್ತಿದ್ದರು. ಮಠದ ಎಲ್ಲಾ ತೋಟಗಳಿಗೆ ಬೇಸಿಗೆ ಕಾಲದಲ್ಲಿ ಸರಿಯಾದ ನೀರಿನ ವ್ಯವಸ್ಥೆ ಮಾಡಲು ಮುಂಜಾಗ್ರತೆ ವಹಿಸುತ್ತಿದ್ದರು.

ಅಕ್ಕ ಮಹಾದೇವಿಯು ತನ್ನ ಆರಾಧ್ಯ ದೈವ ಮಲ್ಲಿಕಾರ್ಜುನನ್ನು ಕುರಿತು ಗಿಡಮರಗಳನ್ನು "ನೀವು ಕಾಣಿರೆ ನೀವು ಕಾಣಿರೆ" ಎಂದು ಕೇಳಿದಂತೆ ಇಂದು ಅವರು ಬೆಳೆಸಿದ ತೋಟಗಳಿಗೆ ಹೋಗಿ ನೋಡಿದಾಗ "ಎನ್ನ ಗುರು ಮಲ್ಲಿಕಾರ್ಜುನ ಶ್ರೀಗಳನ್ನು ನೀವು ಕಾಣಿರೆ ನೀವು ಕಾಣಿರೆ" ಎಂದು ಕೇಳಿದಂತೆ ಭಾಸವಾಗುತ್ತದೆ.

**- ಡಾ.ಎಂ ಈಶ್ವರ ಶರ್ಮ**
ವಿಶ್ರಾಂತ ಹಿಂದಿ ಪ್ರಾಧ್ಯಾಪಕರು
ತರಳಬಾಳು ಬಡಾವಣೆ, ದಾವಣಗೆರೆ

## ತನಿಷ್ಕ ಶೋ ರೂಂನಲ್ಲಿ ವೈದ್ಯರ ದಿನ



ದಾವಣಗೆರೆ, ಜು. 6- ನಗರದ ತನಿಷ್ಕ ಜ್ಯೂಯಲರಿ ಶೋ ರೂಂನಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಕ್ಕಳ ತಜ್ಞರಾದ ಡಾ. ಗುರುಪ್ರಸಾದ್, ಡಾ. ರವಿಗೌಡ್ರು, ಡಾ. ಯೋಗೇಶ್, ಡಾ. ಪ್ರೀತಿ, ಡಾ. ಪ್ರಶಾಂತ್, ಶೋ ರೂಂ. ಮಾಲೀಕರಾದ ಕೆ.ಜೆ. ಅಬ್ರಾರ್, ಕೆ.ಜೆ. ಆಫಕ್ ರಜ್ವಿ, ಕೆ. ಜಾವೀದ್ ಸಾಬ್, ಜಾಹ್ನರ್ ಜಾವೀದ್, ಅಂಜಲಿ ಮತ್ತು ಇತರರು ಉಪಸ್ಥಿತರಿದ್ದರು.

## ಮಲಬಾರ್ ಗೋಲ್ಡ್‌ನಲ್ಲಿ ವೈದ್ಯರ ದಿನ




ದಾವಣಗೆರೆ, ಜು. 6 - ನಗರದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ವತಿಯಿಂದ ಡಾಕ್ಟರ್ ಡೇ ಪ್ರಯುಕ್ತ ಹಿರಿಯ ವೈದ್ಯರುಗಳಾದ ಡಾ. ಮಮತ ಕುಸಗೂರು, ಡಾ. ಸರೋಜ ರಾಜಶೇಖರ್, ಡಾ. ಬಂದಮ್ಮ ನರೇಂದ್ರ ಅವರುಗಳಿಗೆ ಗೌರವ ಸನ್ಮಾನ ಮಾಡಿ ಕೇಕ್ ಕತ್ತರಿಸುವ ಮೂಲಕ ಡಾಕ್ಟರ್ ಡೇ ಆಚರಿಸ ಲಾಯಿತು. ಈ ಸಂದರ್ಭದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್‌ನ ಮುಖ್ಯಸ್ಥರಾದ ಬೇಸಿಲ್ ರಾಜನ್, ಸರ್ಫಾಜ್ ಮತ್ತಿತರರು ಉಪಸ್ಥಿತರಿದ್ದರು.

## ಮಕ್ಕಳೊಂದಿಗೆ ಮಕ್ಕಳಾಗಿ ಭಾವನೆ, ವಿಚಾರಗಳನ್ನು ತುಂಬುವುದು ಸಂಕೀರ್ಣ ಕಾರ್ಯ



ಭರಮಸಮುದ್ರ

ಭರಮಸಮುದ್ರ, ಜು.6- ತಮ್ಮ ಶೈಕ್ಷಣಿಕ ವೃತ್ತಿಯಲ್ಲಿ ಶಿಕ್ಷಣದ ಘನತೆ ಮತ್ತು ಪಾವಿತ್ರ್ಯತೆಯನ್ನು ಪೊರೆಯಲು ಸಹೋದ್ಯೋಗಿಗಳು, ಇಲಾಖಾಧಿಕಾರಿಗಳು ಹಾಗೂ ಸಾರ್ವಜನಿಕರೊಂದಿಗೆ ನಾನು ಉತ್ತಮ ಬಾಂಧವ್ಯ ಸಾಧಿಸಿದ್ದು ನನ್ನ ತೃಪ್ತಿಗೆ ಕಾರಣವಾಗಿದೆ ಎಂದು ಜಗಳೂರು ತಾಲ್ಲೂಕು ಭರಮಸಮುದ್ರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಬಡ್ತಿ ಮುಖ್ಯ ಶಿಕ್ಷಕಿ ಬಿ.ಎಂ. ಮಂಜುಳ ಅಭಿಪ್ರಾಯಪಟ್ಟರು.

ನಿನ್ನೆ ಸೇವೆಯಿಂದ ನಿವೃತ್ತರಾದ ಅವರಿಗೆ ಶಾಲಾಭಿವೃದ್ಧಿ ಸಮಿತಿ, ಶಾಲೆ, ಪೋಷಕರು ಹಾಗೂ ಗ್ರಾಮಸ್ಥರಿಂದ ಏರ್ಪಾಡಾಗಿದ್ದ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳೊಂದಿಗೆ ಮಕ್ಕಳಾಗಿ ಭಾವನೆ ಮತ್ತು ವಿಚಾರಗಳನ್ನು ಮಕ್ಕಳಲ್ಲಿ ತುಂಬುವುದು ಸಂಕೀರ್ಣವಾದ ಕೆಲಸವಾದರೂ, ಅದಕ್ಕೆ ಅಗತ್ಯ ಸಿದ್ಧತೆಗಳೊಂದಿಗೆ ಅಧ್ಯಯನಗೈಯ್ಯುತ್ತಾ ಕ್ರಿಯಾಶೀಲತೆ ಮತ್ತು ಸೃಜನಶೀಲತೆಯ ಹಾಡು, ಸಂಗೀತ, ನೃತ್ಯ, ನಾಟಕ ಮತ್ತಿತರೆ ಕಲಾತ್ಮಕ ಚಟುವಟಿಕೆಗಳನ್ನು ನನ್ನ ಬೋಧನೆಯಲ್ಲಿ ರೂಢಿಸಿಕೊಂಡಿದ್ದು ಮಕ್ಕಳ ಮೇಲೆ ಪ್ರಭಾವ ಬೀರಿತು. ಇದು ನನಗೆ ವೃತ್ತಿಪರ ತೃಪ್ತಿ ನೀಡಿರುವುದಲ್ಲದೆ, ಸುದೀರ್ಘ ಅವಧಿಯ ಸೇವೆ ಎಷ್ಟು ಬೇಗ ಕಳೆದುಹೋಯಿತಲ್ಲ ಎಂಬ ವಿಸ್ಮಯಕ್ಕೆ ಇಂದು ಕಾರಣವಾಗಿದೆ ಎಂದು ಅವರು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎನ್.ಜೆ. ವಾಗೀಶ್ ಮಾತನಾಡಿ, ಬಿ.ಎಂ.ಮಂಜುಳ ಮಗುವಿನಂಥ ಮನಸ್ಸಿನವರು. ತಾನು ಮುಖ್ಯ ಶಿಕ್ಷಕಿ ಎಂಬ ಹಮ್ಮು ಬಿಮ್ಮುಗಳಿಲ್ಲದೆ ಸಹೋದ್ಯೋಗಿಗಳೊಂದಿಗೆ, ಶಾಲಾಭಿವೃದ್ಧಿ ಸಮಿತಿಯೊಂದಿಗೆ ಮತ್ತು ಸಾರ್ವಜನಿಕರೊಂದಿಗೆ ನಡೆದುಕೊಂಡದ್ದು ಅವರ ವಿಶಿಷ್ಟ ಗುಣವಾಗಿದೆ. ಇಂಥ ಗುಣಗಳುಳ್ಳ ಶಿಕ್ಷಕರು ಹೆಚ್ಚಾದರೆ, ಸರ್ಕಾರಿ ಶಾಲೆಗಳು ಇನ್ನಷ್ಟು ಸುಧಾರಿಸುತ್ತವೆ ಎಂದು ಮುಖ್ಯ ಶಿಕ್ಷಕಿಯ ಗುಣಗಾನ ಮಾಡಿದರು.

ಕಾರ್ಯಕ್ರಮದಲ್ಲಿ ಹೊಸಕೆರೆ ಕ್ಲಸ್ಟರ್ ಸಿ.ಆರ್.ಪಿ. ವೀರೇಶ್, ದೇವಿಕೆರೆ ಕ್ಲಸ್ಟರ್ ಸಿ.ಆರ್.ಪಿ. ಆಂಜನೇಯ, ಪ್ರೌಢಶಾಲಾ ಸಿಬ್ಬಂದಿಗಳಾದ ವೆಂಕಟೇಶ್, ಬಸವರಾಜ್, ತಿಪ್ಪೇಸ್ವಾಮಿ ಹಾಗೂ ಸದರಿ ಶಾಲೆಯ ಶಿಕ್ಷಕರುಗಳಾದ ಗಿಡ್ಡಮ್ಮ, ನೇತ್ರಾವತಿ, ತಿಪ್ಪೇಸ್ವಾಮಿ, ಉಮಾಶಂಕರ್ ಉಪಸ್ಥಿತರಿದ್ದರು.

## ಕ್ರೀಡಾಪಟುಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಜು.6- ಪರಿಶಿಷ್ಟ ಜಾತಿ ಉಪಯೋಜನೆಯಡಿಯಲ್ಲಿ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆಗಾಗಿ ಸಹಾಯಧನ ನೀಡಲಾಲಗುವುದು. ಅರ್ಜಿ ನಮೂನೆಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯ, ಜಿಲ್ಲಾ ಕ್ರೀಡಾಂಗಣ ಕಛೇರಿಯಲ್ಲಿ ಪಡೆದು, ಇದೇ ದಿನಾಂಕ 16ರ ಒಳಗಾಗಿ ಸಲ್ಲಿಸತಕ್ಕದ್ದು, ವಿವರಗಳಿಗೆ ದೂರವಾಣಿ ಸಂಖ್ಯೆ: 08192-237480.

## ಕುಂಬಳೂರಿನಲ್ಲಿ ಬಿಜೆಪಿ ರೈತ ಮೋರ್ಚಾದಿಂದ ಪರಿಸರ ಜಾಗೃತಿ



ಮಲೇಬೆನ್ನೂರು, ಜು.6- ಕುಂಬಳೂರು ಗ್ರಾಮದ ಬಸವ ಗುರು ಕುಲ ವಿದ್ಯಾಸಂಸ್ಥೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಹರಿಹರ ತಾ. ಬಿಜೆಪಿ ರೈತ ಮೋರ್ಚಾದಿಂದ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಅಂಗವಾಗಿ ಪರಿಸರ ಜಾಗೃತಿ ಅಂಗವಾಗಿ ಸಸಿಗಳನ್ನು ನೆಡಲಾಯಿತು.

ಗ್ರಾ.ಪಂ. ಅಧ್ಯಕ್ಷರಾದ ಲೀಲಾ ಶಿವಕುಮಾರ್, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಹರಿಹರ ತಾ. ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೊಂಡಜ್ಜಿ ವೀರಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಎನ್.ಹಳ್ಳಿಯ ಕೆ.ಹೆಚ್.ನಾಗನಗೌಡ, ಉಪಾಧ್ಯಕ್ಷ ನಿಟ್ಟೂರಿನ ಬಿ.ಜಿ. ಧನಂಜಯ, ಕಾರ್ಯದರ್ಶಿ ಲೋಕಿಕೆರೆ ಅಣ್ಣಪ್ಪ, ತಾ. ಕಾರ್ಯದರ್ಶಿ ಬಿ.ಜಿ. ನಿರಂಜನಮೂರ್ತಿ, ತಾ. ಬಿಜೆಪಿ ಕಾರ್ಯದರ್ಶಿ ಹುಗ್ಗಿ ಮಹಾಂತೇಶ್, ಕುಂಬಳೂರು ಗ್ರಾಮದ ಹಳೇಮನಿ ಶಂಭುಲಿಂಗಪ್ಪ, ಕೆ.ತೀರ್ಥಪ್ಪ, ಹೊರಟ್ಟಿ ಶಿವರುದ್ರಪ್ಪ, ಡಿ.ರವೀಂದ್ರನಾಥ್, ಗ್ರಾ.ಪಂ. ಸದಸ್ಯರಾದ ಎನ್.ಜೆ.ಕಲ್ಲೇಶ್, ಜಿ.ಎಂ.ಹರೀಶ್, ಡಿ.ಗಣೇಶ್, ಕೆ.ಜಿ.ಹನುಮಂತಪ್ಪ, ಬೆನ್ನೂರು ರಮೇಶ್, ಕೆ.ಶಿವಣ್ಣ, ನಾಗೋಳ್ ಬಾಬು ಮತ್ತಿತರರು ಈ ವೇಳೆ ಭಾಗವಹಿಸಿದ್ದರು.

## ಗಣೇಶ್‌ರಾವ್‌ಗೆ ಬೀಳ್ಕೊಡುಗೆ



ಮಲೇಬೆನ್ನೂರು

ಮಲೇಬೆನ್ನೂರು, ಜು.6- ಪುರಸಭೆಯ ಪ್ರಭಾರ ಮುಖ್ಯಾಧಿಕಾರಿಯಾಗಿದ್ದ ಕಛೇರಿಯ ವ್ಯವಸ್ಥಾಪಕ ಗಣೇಶ್‌ರಾವ್ ಅವರಿಗೆ ವರ್ಗಾವಣೆಯಾಗಿದ್ದು, ಸೋಮವಾರ ಅವರನ್ನು ಸನ್ಮಾನಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು.

ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಮಾಜಿ ಸದಸ್ಯ ಬಿ. ಸುರೇಶ್, ಮುಖಂಡರಾದ ಕೆ.ಪಿ. ಗಂಗಾಧರ್, ಓ.ಜಿ. ಕುಮಾರ್, ಜಿಗಳೇರ ಹಾಲೇಶಪ್ಪ, ಐರಣಿ ಅಣ್ಣಪ್ಪ, ಪಿ.ಬಿ. ಗಂಗಾಧರ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ಬಿ.ಪಿ. ದೇವರಾಜ್, ಟಿ. ಶಿವಕುಮಾರ್, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಪ್ರವೀಣ್, ಚಿತ್ರಾ, ಸಿಬ್ಬಂದಿಗಳಾದ ಪರಶುರಾಮ್, ಮಮ್ತಾಜ್, ಕಿಜರ್, ಇಮಾಂ, ಸಲ್ಮಾ ಮತ್ತಿತರರು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30. ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್
ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ಸೈಟ್ ಮಾರಾಟಕ್ಕೆ**
ಉತ್ತರ 30×50 (ಅಪ್ರೂವಲ್) ಪಿ.ಬಿ. ರೋಡ್ ಸಾಯಿ ಹೋಟೆಲ್ ಮುಂದೆ ಸವಣೂರು ಪ್ಲಾಜಾದ ಅಪೊಲೋ ಕಾಂಪೌಂಡ್ ಹಿಂದೆ, ಅವೋಪ ಲೇಔಟ್‌ನಲ್ಲಿ
ಕಿರಣ್ ಬೂಸ್ನೂರ್ : 97315 63409

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖದಲ್ಲಿ ಖವಾಗಿರುವ ವಿಶಾಲವಾದ ಹಾಲ್ ಕಿಚನ್, 2ಬೆಡ್ ರೂಂ, ಪೂಜಾ ರೂಂ ಇರುವ ವಿಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿ ಬಾಡಿಗೆಗೆ ಇದೆ.
79750 35395

**ಟೆಲಿಕಾಲರ್ಸ್ ಬೇಕಾಗಿದ್ದಾರೆ**
ಫೈನಾನ್ಷಿಯಲ್ ಫೀಲ್ಡ್‌ನಲ್ಲಿ ಟೆಲಿಕಾಲರ್ಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
98447 43673
87226 88275

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 45x90 ಉತ್ತರ, 30x40 ದಕ್ಷಿಣ ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ ಶಿವ-ಪಾರ್ವತಿ ಬಡಾವಣೆಯಲ್ಲಿ 30x60 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಮನೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ, ತ್ರಿಶೂಲ್ ಟಾಕೀಸ್ ರೋಡಿನಲ್ಲಿ ಉತ್ತರ ದಿಕ್ಕಿನ, ವಾಸ್ತು ಪ್ರಕಾರ, 3BHK, ಮನೆ 2nd ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. (ಆಫೀಸ್‌ಗೂ ಸಹ ಇದೆ)
94483 39231, 77951 49297

**ತಕ್ಷಣ ಬೇಕಾಗಿದ್ದಾರೆ**
ವಿದ್ಯಾನಗರದ 1st ಬಸ್‌ಸ್ಟಾಪ್‌ನಲ್ಲಿ ವಯಸ್ಸಾದ ಹೆಣ್ಣುಮಗಳನ್ನು ನೋಡಿಕೊಂಡು ಅಡುಗೆ ವಗೈರೆ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
ಸಂಬಳ: 6500/- ನಿಂದ 7500/-ರೂಗಳು.
94496 79324

**ಸಾಲಸೌಲಭ್ಯ**
ರೆವಿನ್ಯೂ ಪ್ರಾಪರ್ಟಿ ಕನ್‌ಸ್ಟ್ರಕ್ಷನ್ ಲೋನ್ಸ್, ರೆವಿನ್ಯೂ ಪ್ರಾಪರ್ಟಿ ಮಾರ್ಟ್ ಗೇಜ್ ಲೋನ್ಸ್, ಮತ್ತು ಡೋರ್ ನಂಬರ್ ಪ್ರಾಪರ್ಟಿ ಕನ್‌ಸ್ಟ್ರಕ್ಷನ್ ಲೋನ್ಸ್ ಹಾಗೂ ಮಾರ್ಟ್ ಗೇಜ್ ಲೋನ್ಸ್, ಪರ್ಸನಲ್ ಲೋನ್ಸ್, ಬಿಜಿನೆಸ್ ಲೋನ್ಸ್ ಬೇಕಾದಲ್ಲಿ ಸಂಪರ್ಕಿಸಿ
6361428175

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಫೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಮನೆ, ಕಾಂಪ್ಲೆಕ್ಸ್ ಮಾರಾಟಕ್ಕೆ ಇದೆ**
ಬಾಲಾಜಿ ಬಡಾವಣೆಯಲ್ಲಿ 30x50 ಕಾರ್ನರ್ ಸೈಟ್‌ನಲ್ಲಿ ನೆಲಮಹಡಿಯಲ್ಲಿ ಮಳಿಗೆ. ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಮಾರಾಟಕ್ಕೆ ಇದೆ.
98448 82366

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ಸೈಟು ಮಾರಾಟಕ್ಕಿದೆ**
ನಿಟುವಳ್ಳಿಯಿಂದ S S ಹೈಟೆಕ್ ಆಸ್ಪತ್ರೆಗೆ ಹೋಗುವ ದಾರಿಯಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದಲ್ಲಿರುವ ಸೈಟ್ 37.5x90 = 3354 Sq.ft ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81973 00410

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 North, 40x60 South, 80 ಅಡಿ ರೋಡಿಗಿದೆ 40x50 North, 40x60 South, 40 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**2BHK ಫ್ಲಾಟ್ ಮಾರಾಟಕ್ಕಿದೆ**
2 BHK ಫ್ಲಾಟ್ ಮಾರಾಟಕ್ಕಿದೆ. ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
96863 96992
99001 18054

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್
S.T. Somashekhar
98803 37686

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್ ಕುವೆಂಪು ನಗರದಲ್ಲಿರುವ ಶಂಕರ ಲೀಲಾ ಅಪಾರ್ಟ್‌ಮೆಂಟ್ (ಹಳೇ ಶಂಕರ ಲೀಲಾ ಕಲ್ಯಾಣ ಮಂಟಪ) ನಲ್ಲಿ 2BHK ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ
99164 54770

**TO-LET**
3 Bed Room Home available for rent at 9th Main, MCC 'B' Block, Aminitier Solar light, Solar water & AC & bore well. Big room with Solar light & Borewell available for rent accomidating 3 People
63614 60679, 98440 52928




**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್‌ಗಳು ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
99024-52312

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಸೋಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 07.07.2022ರ ಗುರುವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬಾಡಿಗೆ ಮನೆಗಳು ದೊರೆಯುತ್ತವೆ**
2Bed Room Ground Floor, ನಿಜಲಿಂಗಪ್ಪ ಬಡಾವಣೆ, 2 Bed Room Ground Floor ,ನೂತನ ಕಾಲೇಜ್ ಹಿಂಭಾಗ (Only Veg)
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಶಿಕ್ಷಕರು ಬೇಕಾಗಿದ್ದಾರೆ**
D.Ed., B.A. B.Ed., (ಕನ್ನಡ ವಿಷಯ ಪಾಠ ಮಾಡಲು)
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
94480 21985
90365 59690

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹೆಸರು ಬದಲಾವಣೆ**
**ಪಾರೀಬಾಯಿ** ಆದ ನಾನು ತಿಳಿಸುವುದೇನೆಂದರೆ, ನನ್ನ ಆಧಾರ ಕಾರ್ಡ್‌ನಲ್ಲಿ **ಪಾರೀಬಾಯಿ** ಎಂದು ನಮೂದಾಗಿರುತ್ತದೆ ಆದರೆ ನನ್ನ ಬ್ಯಾಂಕ್ ಪಾಸ್ ಬುಕ್ ಖಾತೆಯಲ್ಲಿ **ಪಾರ್ವತಿಬಾಯಿ** ಎಂದು ನಮೂದಾಗಿರುತ್ತದೆ. ಈ ಮೂಲಕ ತಿಳಿಸುವುದೇನೆಂದರೆ ಆ ಎರಡೂ ಹೆಸರುಗಳು ನನ್ನವೆ ಆಗಿದ್ದು ಇನ್ನು ಮುಂದೆ ನನ್ನ ಹೆಸರು **ಪಾರೀಬಾಯಿ** ಎಂದು ನೋಟರಿಯವರ ಸಮ್ಮುಖದಲ್ಲಿ ದಿನಾಂಕ 6/7/2022 ರಂದು ಬದಲಾಯಿಸಿಕೊಂಡಿರುತ್ತೇನೆ.

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
97432 17566, 91084 18233

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50Weast 40 ಅಡಿ ರೋಡಿಗಿದೆ Rate,1750/- 30x50 East, 30x40,30x40 South ಅಕ್ಕ ಪಕ್ಕ 30x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Manager To Work In Goushala of Davangere
Salary 15k On Experience Basis
Contact With All Original Certificate
Dinesh - 99803 39333
Suresh - 94821 84112

**12A, 80G CSR & NEETHI AYOGA**
ರಿಜಿಸ್ಟ್ರೇಷನ್ನನ್ನು ಅತೀ ಕಡಿಮೆ ಫೀಸ್ & ಅವಧಿಯಲ್ಲಿ ಮಾಡಿಕೊಡಲಾಗುತ್ತದೆ.
86181 29962, 99025 03129

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕು ಹೆಚ್.ಡಿ ಪುರದ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ.
ಸಂಪರ್ಕಿಸಿ.
94484 39639

**Job Vacancy**
1) DEd/BEd/Any Degree :-01
2)Computer :-01, 3)BPEd/CPEd:-01
NISARGA CONVENT & HIGH SCHOOL
SOG Badavane, Industrial Area,Davangere-05
87927 02690
9986226454, 9844443374

**SHARP**
Call for Interview Service
Engineers Diploma/ ITI with two wheeler Service of Sharp Company office Photo Copies Machines
Gaurov Communications
Davangere
93799 06688, 94487 28866

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block,
Near Swimming Pool, Davangere.
98440 65638

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**CHANGE OF NAME**
I, Damodar P.Patel, S/O Premji H.Patel, would like to bring it to notice of all that this is my correct name to be used in all day today business and Proofs. My name in SSLC marks sheet was mentioned as Damodhara P and both of these names belong to me. I swear in front of Notary dated 6/7/2022 to use Damodar P.Patel as my name in all future correspondence.
- Damodar P.Patel

**ಓಂ ಶ್ರೀ ಸಾಯಿ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ**
ನೀವು ತುಂಬಾ ನೊಂದಿದ್ದೀರಾ?
ಗಂಡ ಹೆಂಡತಿ ಕಲಹ, ಪ್ರೀತಿಯಲ್ಲಿ ನಂಬಿ ಮೋಸ, ಸ್ತ್ರೀ ಪುರುಷ ವಶೀಕರಣ, ವ್ಯಾಪಾರದಲ್ಲಿ ನಷ್ಟ, ಲೈಂಗಿಕ ಸಮಸ್ಯೆ, ಸಾಲಬಾಧೆ, ಮನೆಯಲ್ಲಿ ಅಶಾಂತಿ. 100% ಪರಿಹಾರ ಶತಸಿದ್ಧ.
ಪಂಡಿತ್ ಆನಂದ ಗುರೂಜಿ
96064 23948

**ಶ್ರೀ ಭೌಲಿ ದೇವಿ ಜೋತಿಷ್ಯರು**
ಪಂ. ಆತ್ಮಾನಂದ ರಾವ್ ಶ್ರೀ ಭೌಲಿ ಭೂತರಾಯ ದೇವಿಯ ಆರಾಧಕರು. ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ.ಸೂ: ಸ್ತ್ರೀ-ಪುರುಷ ವಶೀಕರಣ, ಕೇವಲ 11 ಗಂಟೆಯಲ್ಲಿ ಪರಿಹಾರ ಶತಸಿದ್ದ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
82176 83615

**ಹೆಸರು ಸ್ಪಷ್ಟೀಕರಣ**
ನಜೀರ್ ಅಹಮ್ಮದ್ ಬಿನ್ ಬಾಬು ಸಾಬ್ 4ನೇ ಮೇನ್, 7ನೇ ಕ್ರಾಸ್, ಯಲ್ಲಮ್ಮ ನಗರ ಏರ್‌ಟೆಲ್ ಟವರ್ ಹತ್ತಿರ, ದಾವಣಗೆರೆ ವಾಸಿಯಾದ ನಾನ್ನ ಡಿ.ಎಲ್ ನಲ್ಲಿ ನನ್ನ ಹೆಸರು ಅಬ್ದುಲ್ ನಜೀರ್ ಕೆ ಎಂದು ತಪ್ಪಾಗಿ ನಮೂದಾಗಿದ್ದು, ನನ್ನ ಆಧಾರ ಕಾರ್ಡ್‌ನಲ್ಲಿರುವಂತೆ ನನ್ನ ನಿಜವಾದ ಹೆಸರು ನಜೀರ್ ಅಹಮದ್ ಎಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ದಿನಾಂಕ: 20/06/2022 ರಂದು ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಹೆಸರು ಎಲ್ಲಾ ವ್ಯವಹಾರಗಳು ನಜೀರ್ ಅಹಮ್ಮದ್ ಹೆಸರಿನಲ್ಲಿರುತ್ತವೆ.
ನಜೀರ್ ಅಹಮ್ಮದ್

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

# 12 ರಿಂದ 14 ರವರೆಗೆ ಜಯದೇವ ಜಗದ್ಗುರುಗಳ ಸ್ಮರಣೋತ್ಸವ, ಶರಣ ಸಂಸ್ಕೃತಿ ಉತ್ಸವ











ದಾವಣಗೆರೆ, ಜು.6- ಬಸವ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಇದೇ ದಿನಾಂಕ 12, 13 ಮತ್ತು 14 ರಂದು ಮೂರು ದಿನಗಳ ಕಾಲ ಶಿವಯೋಗಾಶ್ರಮದ ಸಭಾಂಗಣದಲ್ಲಿ ಲಿ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 65 ನೇ ಸ್ಮರಣೋತ್ಸವ ನಡೆಯಲಿದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಶರಣ ಸಂಸ್ಕೃತಿ ಉತ್ಸವ, ಮಹಾತಪಸ್ವಿ ಶ್ರೀ ಮುರುಘರಾಜೇಂದ್ರ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ, ಜಯದೇವ ಶ್ರೀ ಶೂನ್ಯಪೀಠ ಪ್ರಶಸ್ತಿ ಪ್ರದಾನ, ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯ ಪೀಠಾರೋಹಣದ ತೃತೀಯ ದಶಮಾನೋತ್ಸವ, ಡಿ. ಲಿಟ್ ಕೃತಿ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇದೇ ದಿನಾಂಕ 12 ರಂದು ಸಂಜೆ 6.30 ಕ್ಕೆ ಸಾಧಕರ ಸಮಾವೇಶ, ಜಯದೇವ ಶ್ರೀ ಮತ್ತು ಶೂನ್ಯಪೀಠ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಡಾ. ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷತೆ ವಹಿಸುವರು. ಇಳಕಲ್ ಶ್ರೀ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶ್ರೀ ಗುರು ಮಹಾಂತ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ, ಹಾಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ 'ಜಯದೇವ ಶ್ರೀ' ಹಾಗೂ ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಅವರಿಗೆ 'ಶೂನ್ಯಪೀಠ ಅಲ್ಲಮ' ಪ್ರಶಸ್ತಿ ಪ್ರದಾನ (ಪ್ರಶಸ್ತಿ ತಲಾ ಐವತ್ತು ಸಾವಿರ ರೂ. ನಗದು, ಸ್ಮರಣಿಕೆಯನ್ನು ಹೊಂದಿರುತ್ತದೆ) ಮಾಡಲಾಗುವುದು.

ಹರಿಹರದ ಸಾಹಿತಿ ಪ್ರೊ. ಭಿಕ್ಷಾವರ್ತಿಮಠ ಅವರಿಗೆ 'ಶೂನ್ಯಪೀಠ ಚನ್ನಬಸವ' ಹಾಗೂ ಹಾವೇರಿ ಜಿಲ್ಲೆ ಹೊಸರಿತ್ತಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಇವರಿಗೆ ' ಶೂನ್ಯಪೀಠ ಅಕ್ಕನಾಗಮ್ಮ' ಪ್ರಶಸ್ತಿ ಪ್ರದಾನ (ಪ್ರಶಸ್ತಿ ತಲಾ 25 ಸಾವಿರ ರೂ. ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುತ್ತದೆ) ಮಾಡುವುದಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಎಸ್. ರಾಮಪ್ಪ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಮಿಲ್ಲತ್ ವಿದ್ಯಾಸಂಸ್ಥೆ ಕಾರ್ಯದರ್ಶಿ ಸೈಯದ್ ಸೈಫುಲ್ಲಾ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಭಾಗವಹಿಸಲಿದ್ದಾರೆ ಎಂದರು.

ದಿನಾಂಕ 13 ರಂದು ಸಂಜೆ 6.30 ಕ್ಕೆ ಮಹಾ ತಪಸ್ವಿ ಶ್ರೀ ಮುರುಘೇಂದ್ರ ಶಿವಯೋಗಿಗಳ ಲಿಂಗೈಕ್ಯ ಶತಮಾನೋತ್ಸವ, ಡಾ. ಶಿವಮೂರ್ತಿ ಮುರುಘಾ ಶರಣರು ರಚಿಸಿರುವ 'ದಿವ್ಯಪಥ ಲೋಕಹಿತ' ಗ್ರಂಥ ಲೋಕಾರ್ಪಣೆ ಶಿವಮೂರ್ತಿ ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಿ, 'ದಿವ್ಯಪಥ ಲೋಕಹಿತ' ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಡಾ.ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಎಸ್ಪಿ ಸಿ.ಬಿ. ರಿಷ್ಯಂತ್ ಭಾಗವಹಿಸಲಿದ್ದಾರೆ.

14 ರಂದು ಬೆಳಿಗ್ಗೆ 7.30 ಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು 'ಸಹಜ ಶಿವಯೋಗ' ನಡೆಸಿ ಕೊಡಲಿದ್ದಾರೆ. ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಚಿತ್ರದುರ್ಗ ವನಶ್ರೀ ಮಠದ ಡಾ. ಬಸವಕುಮಾರ ಸ್ವಾಮೀಜಿ, ಮಾಚಿದೇವ ಸಂಸ್ಥಾನ ಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಜನವಾಡ ಅಲ್ಲಮಪ್ರಭು ಆಶ್ರಮದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಹಾವೇರಿ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ಸಿದ್ಧರಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಜಯನಗರ ಬಸವ ಕೇಂದ್ರದ ಅಧ್ಯಕ್ಷ ಡಿ.ಟಿ. ಅರುಣ್ ಕುಮಾರ್, ಮುಂಬೈ ಬಸವ ಕೇಂದ್ರದ ವೀರಣ್ಣ ಕನವಳ್ಳಿ, ಬೀದರ್ ಬಸವ ಕೇಂದ್ರದ ಕಲ್ಯಾಣರಾವ್ ಡಾವಣಗಾವೆ, ಲಯನ್ಸ್ ಕ್ಲಬ್‌ನ ಎನ್.ಆರ್. ನಾಗಭೂಷಣರಾವ್, ಅಭಿ ಕಾಟನ್ಸ್ ಮಾಲೀಕ ಎನ್. ಬಕ್ಕೇಶ್, ಇಳಕಲ್ ಉದ್ಯಮಿ ಮಲ್ಲಿಕಾರ್ಜುನ್ ಶೆಟ್ಟರ್, ಜಾಲಿನಗರದ ಮುಖಂಡ ಶಿವಾನಂದಪ್ಪ ಬೆನ್ನೂರ, ಮುತ್ತಣ್ಣ ಅಂಗಡಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10 ಕ್ಕೆ ಅಕ್ಕಮಹಾದೇವಿ ನೇತ್ರದಾನ ಪ್ರೇರಣಾ ಸಮಿತಿ, ಚಿಗಟೇರಿ ಜಿಲ್ಲಾಸ್ಪತ್ರೆ, ಬಸವ ಕೇಂದ್ರದ ಸಹಯೋಗದಲ್ಲಿ ಉಚಿತ ನೇತ್ರ ಪರೀಕ್ಷೆ ಮತ್ತು ಚಿಕಿತ್ಸಾ ಶಿಬಿರ ನಡೆಯಲಿದೆ.

ಸಂಜೆ 6.30 ಕ್ಕೆ ಮುರುಘಾ ಶರಣರಿಗೆ ಅಭಿನಂದನೆ 'ವಚನ ಸಂಸ್ಕೃತಿಯ ಸಮುದಾಯ ತತ್ವ ಮತ್ತು ಸಮಕಾಲಿನ ಸಂದರ್ಭ' ಡಿ.ಲಿಟ್. ಕೃತಿ ಲೋಕಾರ್ಪಣೆಗೊಳ್ಳಲಿದೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಡಾ. ಶಾಂತವೀರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಡಾ. ದೊಡ್ಡರಂಗೇಗೌಡ ಕೃತಿ ಲೋಕಾರ್ಪಣೆ ಮಾಡಲಿದ್ದು, ವಿಶೇಷ ಅಹ್ವಾನಿತರಾಗಿ ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಆಗಮಿಸುವರು. ಡಾ. ಭೈರಮಂಗಲ ರಾಮೇಗೌಡ ಅಭಿನಂದನಾ ನುಡಿಗಳನ್ನಾಡುವರು. ವೀರಪುತ್ರ ಶ್ರೀನಿವಾಸ್ ಪುಸ್ತಕ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಂ. ಜಯಕುಮಾರ್, ಕೆ.ಎನ್. ಓಂಕಾರಪ್ಪ, ಲಂಬಿ ಮುರುಗೇಶಪ್ಪ, ಕಣಕುಪ್ಪಿ ಮುರುಗೇಶಪ್ಪ, ಹಾಸಭಾವಿ ಕರಿಬಸಪ್ಪ, ಕುಂಟೋಜಿ ಚನ್ನಪ್ಪ, ನಸೀರ್ ಅಹಮದ್ ಉಪಸ್ಥಿತರಿದ್ದರು.

## ವಾಲ್ಮೀಕಿ ಗುರುಪೀಠ ಸೂಪರ್ ಸೀಡ್ ಮಾಡಿ, ಆಡಳಿತಾಧಿಕಾರಿ ನೇಮಕ ಮಾಡಿ

ದಾವಣಗೆರೆ, ಜು. 6- ರಾಜನಹಳ್ಳಿ ವಾಲ್ಮೀಕಿ ಗುರುಪೀಠ ಟ್ರಸ್ಟನ್ನು ಸೂಪರ್ ಸೀಡ್ ಮಾಡುವ ಮೂಲಕ ಶ್ರೀಮಠಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸುವಂತೆ ವಕೀಲರಾದ ಗುಮ್ಮನೂರು ಕೆ.ಎಂ. ಮಲ್ಲಿಕಾರ್ಜುನ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶೇ. 7.5 ರಷ್ಟು ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಸುತ್ತಿರುವ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿಯವರ ಧರಣಿ ಸತ್ಯಾಗ್ರಹ ಕಾನೂನು ಬಾಹಿರ ಎಂದರು.

ಸರ್ವೋಚ್ಛ ನ್ಯಾಯಾಲಯದ ಆದೇಶದ ವಿರುದ್ಧ ಮೀಸಲಾತಿ ನೀಡಲು ಬರುವುದಿಲ್ಲ ಎಂದು ಗೊತ್ತಿದ್ದರೂ ಸಮಾಜದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಲಾಗುತ್ತಿದೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಹಣವನ್ನು ವಾಲ್ಮೀಕಿ ಜಾತ್ರೆಗೆ ಬಳಸಿಕೊಳ್ಳುವ ಮೂಲಕ ಸರ್ಕಾರಕ್ಕೆ ಮೋಸ ಮಾಡಲಾಗಿದೆ ಎಂದು ಆರೋಪಿಸಿದರು. ಇದೇ ದಿನಾಂಕ 11 ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಶ್ರೀಗಳು ನೀಡಿರುವ ಹೇಳಿಕೆ ಪ್ರಚೋದನಕಾರಿಯಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಜನಾಂಗದ ಹಿತರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎಸ್.ಹೆಚ್. ಸುಭಾಶ್, ಅರವಿಂದಾಕ್ಷ ಉಪಸ್ಥಿತರಿದ್ದರು.

## ನಗರದಲ್ಲಿಂದು ವೀರಗಾಸೆ ಪ್ರದರ್ಶನ

ಬಸವೇಶ್ವರ ಗ್ರಾಮೀಣ ಸಾಂಸ್ಕೃತಿಕ ಕಲಾ ವೇದಿಕೆ (ಎಲೆಬೇತೂರು) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಾಟಕ ಮತ್ತು ವೀರಗಾಸೆ ಪ್ರದರ್ಶನ ನಡೆಯಲಿದೆ.

ಶ್ರೀ ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ (ಚನ್ನಗಿರಿ) ಸಾನ್ನಿಧ್ಯ ಮತ್ತು ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದ ಉದ್ಘಾಟನೆ ಬಸವರಾಜ ಐರಣಿ ಅವರಿಂದ ನಡೆಯುವುದು. ಮುಖ್ಯ ಅತಿಥಿಗಳಾಗಿ ರವಿಚಂದ್ರ, ಪ್ರೊ. ಹೆಚ್. ಚನ್ನಪ್ಪ, ಬಿ.ಇ. ತಿಪ್ಪೇಸ್ವಾಮಿ ಆಗಮಿಸುವರು. ಕಾರ್ಯಕ್ರಮದಲ್ಲಿ ಹೆಚ್. ಮೆಹಬೂಬ್ ಅಲಿ ಮತ್ತು ಸಂಗಡಿಗರಿಂದ 'ಧರ್ಮದೇವತೆ' ಹಾಗೂ ಬಿ. ಹನುಮಂತಚಾರಿ ಮತ್ತು ಸಂಗಡಿಗರಿಂದ 'ವೀರಗಾಸೆ' ಪ್ರದರ್ಶನಗೊಳ್ಳಲಿದೆ.

## ಕರಾಟೆ : ನಿಧಿ ಬೇತೂರ್‌ಗೆ ಬೆಳ್ಳಿ, ಕಂಚು




ದಾವಣಗೆರೆ, ಜು. 6 - ಚೆನ್ನೈನಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಚೆನ್ನೈ ಓಪನ್ ಕರಾಟೆ ಓಪನ್ ಚಾಂಪಿಯನ್ ಶಿಪ್ ಮತ್ತು ಲೀಗ್ ಸ್ಪರ್ಧೆಯ 9 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ನಗರದ ನಿಧಿ ಬೇತೂರು ಸ್ಪರ್ಧಿಸಿ ಕಟಾ ವಿಭಾಗದಲ್ಲಿ ಬೆಳ್ಳಿ ಹಾಗೂ ಕುಮಿಟೆ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾಳೆ. ಕೆ.ಪಿ.ಜೋಸ್ ಅವರಿಂದ ತರಬೇತಿ ಪಡೆದಿರುವ ನಿಧಿ ನಗರದ ಅಭಿಷೇಕ್ ಬೇತೂರು ಹಾಗೂ ಶ್ರೀಮತಿ ಶ್ವೇತಾ ದಂಪತಿ ಪುತ್ರಿ.

## ನಗರದಲ್ಲಿ ಇಂದು ಆರ್‌ಪಿಐ ಸಭೆ

ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ)ದ ಜಿಲ್ಲಾ ಪದಾಧಿಕಾರಿಗಳ ಸಮಾವೇಶವು ಇಂದು ಮಧ್ಯಾಹ್ನ 12ಕ್ಕೆ ಇಲ್ಲಿನ ಭಗತ್‌ಸಿಂಗ್ ನಗರ ರಸ್ತೆಯಲ್ಲಿರುವ ಎಸ್‌ಜೆಎಂ ಎಂಟರ್‌ಪ್ರೈಸಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾವೇಶವನ್ನು ಪಕ್ಷದ ರಾಜ್ಯಾಧ್ಯಕ್ಷ ಡಾ. ಎಂ. ವೆಂಕಟಸ್ವಾಮಿ ಉದ್ಘಾಟಿಸಲಿದ್ದು, ರಾಜ್ಯ ಕಾರ್ಯಕಾರಿಣಿಯ ಪದಾಧಿಕಾರಿಗಳು, ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಪಕ್ಷದ ಜಿಲ್ಲಾಧ್ಯಕ್ಷ ಎನ್. ಅಜ್ಜಪ್ಪ ತಿಳಿಸಿದ್ದಾರೆ.

## ರೈತರಿಗೆ ಪಶುಸಂಗೋಪನಾ ತರಬೇತಿ

ದಾವಣಗೆರೆಯ ಪಶು ಆಸ್ಪತ್ರೆ ಆವರಣದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಇಂದು ಮತ್ತು ನಾಳೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ವಿವರಕ್ಕೆ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ (ದೂರವಾಣಿ ಸಂಖ್ಯೆ 08192-233787) ವನ್ನು ಸಂಪರ್ಕಿಸಿ.

# ಕಾರ್ಮಿಕರ ಕುಂದಿದ ಕಾರಣ ರಾಜಕೀಯ ಪಕ್ಷಗಳು ಕಾರ್ಮಿಕರನ್ನು ಕಡೆಗಣಿಸುತ್ತಿವೆ



**ಸಿಪಿಐ ಜಿಲ್ಲಾ ಖಜಾಂಚಿ ಆನಂದ್ ರಾಜ್**

ದಾವಣಗೆರೆ, ಜು. 6- ಕಾರ್ಮಿಕರ ಶಕ್ತಿ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ಕಾರ್ಮಿಕರನ್ನು ನಿರ್ಲಕ್ಷಿಸುತ್ತಿವೆ. ಕಾರಣ ನಾವು ಉದ್ಧಾರವಾಗಬೇಕೆಂದರೆ ರಾಜಕೀಯವಾಗಿ ಸ್ಥಾನಮಾನ ಪಡೆದು, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕಿದೆ ಎಂದು ಸಿಪಿಐ ಜಿಲ್ಲಾ ಖಜಾಂಚಿ ಆನಂದ್ ರಾಜ್ ಹೇಳಿದರು.

ನಗರದ ಕಾಂ.ಪಂಪಾಪತಿ ಭವನದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಹಾಗೂ ಭಾರತ ಕಮ್ಯುನಿಸ್ಟ್ ಪಾರ್ಟಿಯ 3ನೇ ಶಾಖಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಪಂಪಾಪತಿ ನಗರಸಭೆ ಸದಸ್ಯರಾಗಿ, ಶಾಸಕರಾಗಿದ್ದ ಕಾಲದಲ್ಲಿ ನಗರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಗರದಲ್ಲಿ ಸಾಲುಮರಗಳು, ಟಿವಿ ಸ್ಟೇಷನ್ ಕೆರೆ, ಉದ್ಯಾನವನಗಳು, ಬಸ್ ನಿಲ್ದಾಣ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಆದರೆ ಇತ್ತೀಚೆಗೆ ಬಂದ ಯಾವುದೇ ಶಾಸಕರಾಗಲೀ ಯಾವುದೇ ಪಕ್ಷದ ಜನಪ್ರತಿನಿಧಿಗಳಿಗಾಗಲೀ ದಾವಣಗೆರೆ ನಗರಕ್ಕೆ ಬೇಕಾದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ ಎಂದು ಕಿಡಿಕಾರಿದರು.

ಕಾರ್ಮಿಕರು ರಾಜಕೀಯವಾಗಿ ಬೆಳೆಯಬೇಕೆಂದರೆ ಹೆಚ್ಚು ಹೆಚ್ಚಾಗಿ ಪಕ್ಷದ ಸದಸ್ಯತ್ವ ಹೊಂದಬೇಕು. ಮಾತ್ರವಲ್ಲ, ಎಲ್ಲಾ ನಗರ, ಜಿಲ್ಲೆಗಳಲ್ಲಿ ಶಾಖೆಗಳನ್ನು ಹೊಂದಬೇಕು. ಆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ತಿಳಿಸಬೇಕಿದೆ. ಮಾತ್ರವಲ್ಲದೆ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವಂತಹ ನಾಯಕರನ್ನು ನಾವು ತಯಾರು ಮಾಡುವ ಮೂಲಕ ಆಯಾ ಸ್ಥಳೀಯ ಸಂಸ್ಥೆಗಳು ಸೇರಿದಂತೆ ವಿಧಾನಸಭೆ, ಸಂಸತ್ತಿಗೆ ಕಳಿಸಿಕೊಡಬೇಕು ಎಂದು ಕಿವಿಮಾತು ಹೇಳಿದರು

ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ರಾಜಾಧ್ಯಕ್ಷ ಆವರಗೆರೆ ಹೆಚ್.ಜಿ. ಉಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮನ್ನು ಆಳುವ ಪಕ್ಷಗಳು ಇಂದು ದೇವರ, ಧರ್ಮದ ಹೆಸರಿನಲ್ಲಿ ಜನರನ್ನು ಒಡೆದು ಆಳುತ್ತಿವೆ. ಆ ಮೂಲಕ ಕಲುಷಿತ ವಾತಾವರಣ ಮೂಡಿಸಿ, ಎಲ್ಲರನ್ನೂ ಆತಂಕಕ್ಕೆ ದೂಡಿವೆ.

ಇಂದು ರೈತ, ಕಾರ್ಮಿಕ ಸೇರಿದಂತೆ ಯಾವುದೇ ದುಡಿಯುವ ವರ್ಗದ ಸಮಸ್ಯೆಗಳನ್ನು ಕೇಳದ ಸರ್ಕಾರಗಳು, ಕೇವಲ ಉಳ್ಳವರ ಪರವಾಗಿ ಕೆಲಸ ಮಾಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿಯಿಂದ ಹಿಡಿದು ಎಲ್ಲಾ ಹಂತದ ಚುನಾವಣೆಯಲ್ಲಿ ಹಣದ ಮೂಲಕ ಮತದಾರರನ್ನು ಕೊಳ್ಳುವ ಮೂಲಕ ಭ್ರಷ್ಟಾಚಾರದ ರಾಜಕೀಯಕ್ಕೆ ರಾಜಕೀಯ ಪಕ್ಷಗಳು ಮುಂದಾಗಿವೆ. ಮತದಾರರು ತಮ್ಮ ನೈಜತೆ ಕಳೆದುಕೊಂಡಿದ್ದಾರೆ. ಮತದಾರರೂ ಕೂಡ ಭ್ರಷ್ಟರಾಗುತ್ತಿದ್ದಾರೆ. ಕಾರಣ ಇನ್ನಾದರೂ ಮತದಾರರು ಜಾಗೃತರಾಗಬೇಕಿದೆ. ಅಲ್ಲದೇ ಭ್ರಷ್ಟಾಚಾರ ಸಹಿತ ಚುನಾವಣೆಗಳನ್ನು ಹಿಮ್ಮೆಟ್ಟಿಸಬೇಕಿದೆ. ಇದು ಕಾರ್ಮಿಕರು ಒಂದಾದರೆ ಮಾತ್ರ ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ವಿ.ಲಕ್ಷ್ಮಣ್ ವಹಿಸಿದ್ದರು. ಪಿ.ಕೆ.ಲಿಂಗರಾಜ್, ಭೀಮಾರೆಡ್ಡಿ, ಶಿವಕುಮಾರ್ ಡಿ.ಶೆಟ್ಟರ್, ಜಿ.ಆರ್.ನಾಗರಾಜ್, ಆವರಗೆರೆ ಎಸ್. ಸಿದ್ದಲಿಂಗಪ್ಪ, ಮುರುಗೇಶ್, ಹಾಲೇಕಲ್ಲು ಸಿದ್ದೇಶ್, ಸುರೇಶ್ ಯರಗುಂಟೆ, ಐರಣಿ ಚಂದ್ರು, ಆವರಗೆರೆ ವಾಸು, ನೇತ್ರಾವತಿ, ನಾಗಮ್ಮ, ಪುಷ್ಪಾ ಇತರರು ಇದ್ದರು.

ಇದೇ ವೇಳೆ ಮುಂದಿನ 3 ವರ್ಷಗಳ ಅವಧಿಗೆ ಕಟ್ಟಡ ಕಾರ್ಮಿಕರ ಭಾರತ ಕಮ್ಯೂನಿಷ್ಟ್ ಪಕ್ಷದ ಶಾಖಾ ಕಾರ್ಯದರ್ಶಿ ಯಾಗಿ ಯರಗುಂಟೆ ಸುರೇಶ್, ಸಹಕಾರ್ಯ ದರ್ಶಿಯಾಗಿ ಎಸ್‌ಜೆಎಂ ನಗರದ ಸುರೇಶ್, ಖಜಾಂಚಿಯಾಗಿ ಸಿದ್ದೇಶ್ ಹಾಲೇಕಲ್ಲು ಇವ ರನ್ನು ಅವಿರೋಧ ಆಯ್ಕೆ ಮಾಡಲಾಯಿತು.

## ನಗರದ ಶ್ರೀಶೈಲ ಮಠದಲ್ಲಿ ನಾಳೆ ಪೂರ್ವಭಾವಿ ಸಭೆ

ದಾವಣಗೆರೆ, ಜು. 6 - ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದ್ವಾದಶ ಪೀಠಾರೋಹಣ ಮಹೋತ್ಸವ ಹಾಗೂ ಜನ್ಮ ಸುವರ್ಣ ಮಹೋತ್ಸವದ ನಿಮಿತ್ತ ಅಕ್ಟೋಬರ್ 29 ರಿಂದ ಜ.15, 2023 ರವರೆಗೆ ನಡೆಯಲಿರುವ ವಿವಿಧ ಧಾರ್ಮಿಕ, ಸಾಮಾಜಿಕ ಹಾಗೂ ಜನಜಾಗೃತಿ ಪಾದಯಾತ್ರಾ ಕಾರ್ಯಕ್ರಮಗಳ ಪೂರ್ವಭಾವಿ ಸಭೆ ನಾಡಿದ್ದು ದಿನಾಂಕ 8 ರಂದು ಶುಕ್ರವಾರ ಸಂಜೆ 4 ಗಂಟೆಗೆ ಶ್ರೀಶೈಲ ಮಠದಲ್ಲಿ ನಡೆಯಲಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಮತ್ತಿತರೆ ಗಣ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪುಣ್ಯಾರಾಧನೆ ಸೇವಾ ಸಮಿತಿ ಪದಾಧಿಕಾರಿಗಳಾದ ಡಿ.ಎಂ. ಹಾಲಸ್ವಾಮಿ, ಕೆ.ಎಂ. ಪರಮೇಶ್ವರಯ್ಯ, ಬನ್ನಯ್ಯಸ್ವಾಮಿ, ದೇವರಮನಿ ಯೋಗೀಶ್ ಮತ್ತಿತರರಿದ್ದರು.

## ವಿಶ್ವ ಯುವ ಕೌಶಲ್ಯ ದಿನ : ಪ್ರಬಂಧ ಸ್ಪರ್ಧೆ

ದಾವಣಗೆರೆ, ಜು.1- ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಇದೇ ದಿನಾಂಕ 15 ರಂದು ವಿಶ್ವ ಯುವ ಕೌಶಲ್ಯ ದಿನಾಚರಣೆ ಪ್ರಯುಕ್ತ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕನ್ನಡ ಅಥವಾ ಆಂಗ್ಲ ಭಾಷೆ, ಯಾವುದಾದರೂ ಒಂದು ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಪದವಿಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೈಗಾರಿಕೆ-ಶೈಕ್ಷಣಿಕ ಒಗ್ಗೂಡಿಕೆಯಿಂದ ಕೌಶಲ್ಯದ ಅಂತರವನ್ನು ಕಡಿಮೆ ಮಾಡುವುದು. ಶಕ್ತಿಯುತ ಹಾಗೂ ಸುಸ್ಥಿರ ಬೆಳವಣಿಗಾಗಿ ಕೌಶಲ್ಯಯುತ ಮಾನವ ಸಂಪನ್ಮೂಲವನ್ನು ಸೃಷ್ಠಿಸುವ ಮಾರ್ಗಗಳು. ಕೌಶಲ್ಯ ಮತ್ತು ಸಾಮರ್ಥ್ಯಗಳ ಮೇಲೆ ಕೇಂದ್ರಿಕೃತವಾದ ಉನ್ನತ ಶಿಕ್ಷಣದ ಬಗ್ಗೆ ಮರುಚಿಂತನೆ.

8 ರಿಂದ 12 ನೇ ತರಗತಿ/ಐಟಿಐ ವಿದ್ಯಾರ್ಥಿಗಳಿಗೆ ಯುವಕರಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ, ಶಿಕ್ಷಣದಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ ವಿಷಯದ ಕುರಿತ ಪ್ರಬಂಧ 1000-1200 ಪದಗಳಿಗೆ ಮೀರದಂತೆ ಇರಬೇಕು. ಪ್ರಬಂಧ ಸಲ್ಲಿಕೆಗೆ ಜುಲೈ 10 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯ ಮಿಷನ್, ಜಿಲ್ಲಾಡಳಿತ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ-24, ದಾವಣಗೆರೆ, ದೂರವಾಣಿ:08192-259447/8971749636 ಯನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದಿನಿಂದ ಪ್ರವಚನ ಮಾಲೆ

ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 65 ನೇ ವರ್ಷದ ಸ್ಮರಣೋತ್ಸವ, ಶರಣ ಸಂಸ್ಕೃತಿ ಉತ್ಸವ, ಶ್ರೀ ಮುರುಘೇಂದ್ರ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ, ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯಪೀಠಾರೋಹಣದ ತೃತೀಯ ದಶಮಾನೋತ್ಸವದ ಅಂಗವಾಗಿ ಇಂದಿನಿಂದ ಇದೇ ದಿನಾಂಕ 11 ರವರೆಗೆ ಶಿವಯೋಗಾಶ್ರಮದ ಆವರಣದಲ್ಲಿ ವಿಶೇಷ ಪ್ರವಚನ ಮಾಲೆ ಏರ್ಪಡಿಸಲಾಗಿದೆ. ಜನವಾಡದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪ್ರವಚನ ನಡೆಸಿಕೊಡಲಿದ್ದಾರೆ.

## ಎಸ್‌ಎಸ್‌ಎಂಬಿ ಶಾಲೆಯಲ್ಲಿ ಪರಿಸರ ದಿನ



ದಾವಣಗೆರೆ, ಜು. 6- ವಿನೋಬನಗರದ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಹೆಚ್.ಎಂ. ಉಜ್ಜನಪ್ಪ, ಪಂಚಾಕ್ಷರಪ್ಪ, ವಜ್ರೇಶ್ವರಿ ಮಹಿಳಾ ಸಂಸ್ಥೆಯ ಸಂಸ್ಥಾಪಕರು, ಕಮಿಟಿಯ ಸದಸ್ಯರುಗಳು, ಕಾರ್ಯದರ್ಶಿ ಗೀತಾ ಪ್ರಭಾಕರ್, ನಿರ್ದೇಶಕರುಗಳಾದ ಗಾಯತ್ರಿ ರವಿ, ಸುಜಾತ ನಾಗೇಶ್ ಉಪಸ್ಥಿತರಿದ್ದರು. ಗೀತಾ ಪ್ರಭಾಕರ್ ಪ್ರಾರ್ಥಿಸಿದರು. ಎಸ್. ಹೆಚ್. ನಾಗರಾಜ್ ನಿರೂಪಿಸಿದರು.

## ಹರಿಹರದಲ್ಲಿ ಬಿಎಸ್‌ಪಿ ಅಭಿಯಾನ



ಹರಿಹರ, ಜು. 6 -ನಗರದಲ್ಲಿ ಬಹುಜನ ಸಮಾಜ ಪಕ್ಷದ ವತಿಯಿಂದ ನಗರದ ವಿವಿಧ ಬಡಾವಣೆಯಲ್ಲಿ ಸಂವಿಧಾನ ರಕ್ಷಿಸೋಣ ದೇಶವನ್ನು ಉಳಿಸೋಣ ಜನ ಜಾಗೃತಿ ಅಭಿಯಾನ ನಡೆಸಲಾಯಿತು.

ಈ ಸಂದರ್ಭದಲ್ಲಿ ಬಹುಜನ ಸಮಾಜದ ಮುಖಂಡರಾದ ಡಿ. ಹನುಮಂತಪ್ಪ, ವೈ. ಮಲ್ಲೇಶಪ್ಪ, ಯಶೋಧ, ಶಬರಿ, ಮಂಜುನಾಥ್, ಅಣ್ಣಪ್ಪ ಅಜ್ಜೇರ್ ಇತರರು ಹಾಜರಿದ್ದರು.

ಬಹುದಿನಗಳ ನಂತರ ಆಕರ್ಷಕ ದೇಶ ನೋಡುವ ಅವಕಾಶ
ಥಾಯಿಲ್ಯಾಂಡ್
ಪಟ್ಟಾಯ ಹಾಗೂ ಬ್ಯಾಂಗ್‌ಕಾಕ್
5 ದಿನಗಳು
ಕೇವಲ ₹ 56000
ವಿಮಾನದರ, ವಸತಿ, ಊಟ, ಪ್ರವೇಶ ಶುಲ್ಕ ಸೇರಿದೆ
ಥಾಯ್ ಏರ್‌ವೇಸ್ ನಲ್ಲಿ ಪ್ರಯಾಣ
ಪ್ರಯಾಣದ ದಿನ 25 ಜುಲೈ
ವಿವರಗಳಿಗೆ 9449984859/9448073129
MOTHI International HOLIDAYS

WANTED
SEEDS NGO- DAVANGERE
Post : Techincal Officer for Spirulina Cultivation Project
Qulification : B.Sc.,/M.Sc., - Microbiology/Biotechnology
Experience : 1 Year Interview : 9.7.2022. Time : 11 AM
Work Place : Neelagunda Cross, Harapanahalli (TQ)
Contact : Mahesh 89044 56566
Sanjeevaiah 94483 73997

## 11ರಂದು ವಿಶ್ವ ಬ್ರಾಹ್ಮಣ ಪೀಠಾಧಿಪತಿಗಳ, ಮಠಾಧಿಪತಿಗಳು ಒಕ್ಕೂಟದ ಸಮ್ಮಿಲನ

ದಾವಣಗೆರೆ, ಜು. 6 - ಅಖಿಲ ಭಾರತ ವಿಶ್ವ ಕರ್ಮ ಪರಿಷತ್, ಜಿಲ್ಲಾ ವಿಶ್ವಕರ್ಮ ಸಮಾಜ ಹಾಗೂ ವಿವಿಧ ಸಂಘಗಳ ಸಹಭಾಗಿತ್ವದಲ್ಲಿ ಬರುವ ಜುಲೈ 11 ರಂದು ಅಖಿಲ ಕರ್ನಾಟಕ ವಿಶ್ವ ಬ್ರಾಹ್ಮಣ ಪೀಠಾಧಿಪತಿಗಳ ಮತ್ತು ಮಠಾಧಿಪತಿಗಳ ಒಕ್ಕೂಟದ ಸಮ್ಮಿಲನ, ಪರಿಷತ್ ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾ ಪುರಸ್ಕಾರ, ಪ್ರಶಸ್ತಿ ಪುರಸ್ಕಾರ, ಸನ್ಮಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವಡ್ನಾಳ್ ಸಾವಿತ್ರಿ ಪೀಠದ ಶ್ರೀ ಶಂಕರಾತ್ಮನಂದ ಸರಸ್ವತಿ ಸ್ವಾಮೀಜಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಸಾಹಿತಿ ಚಂದ್ರಶೇಖರ ಕಂಬಾರ, ಚಿತ್ರನಟರಾದ ಶಶಿ, ವಿಜಯ ರಾಘವೇಂದ್ರ, ನಾಗೇಂದ್ರ ಪ್ರಸಾದ್, ಸುಚೇಂದ್ರ ಪ್ರಸಾದ್, ಸಂಸದ ಜಿ.ಎಂ. ಸಿದ್ದೇಶ್ವರ, ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ರಘುಮೂರ್ತಿ, ಮಾಡಾಳ್ ವಿರೂಪಾಕ್ಷಪ್ಪ, ಎಂ.ಪಿ. ರೇಣುಕಾಚಾರ್ಯ ಇತರರು ಆಗಮಿಸಲಿದ್ದಾರೆ. ಒಕ್ಕೂಟದಿಂದ 80 ಮಠಾಧೀಶರು ಆಗಮಿಸಲಿದ್ದಾರೆ ಎಂದು ಹೇಳಿದರು.

ವಿಶ್ವಕರ್ಮ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ. ಸತೀಶ್ ಕುಮಾರ್ ಮಾತನಾಡಿ, ವಿಶ್ವಕರ್ಮ ಸಮಾಜದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ.85ರಷ್ಟು ಮೇಲ್ಪಟ್ಟು ಅಂಕ ಗಳಿಸಿದ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಶ್ರೀ ಕಾಳಿಕಾದೇವಿ ದೇವಸ್ಥಾನದ ಅರ್ಚಕರುಗಳಿಗೆ ವಿಶೇಷ ಗೌರವ ಸಮರ್ಪಣೆ ಸಲ್ಲಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರಮೇಶ್ವರಾಚಾರ್, ಎಂ.ಇ.ಮೌನೇಶಾಚಾರ್, ಕೆ.ಕಾಳಾಚಾರ್, ಬಾವಿಹಾಳ್ ನಾಗರಾಜ್ ಇತರರು ಉಪಸ್ಥಿತರಿದ್ದರು.

## ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಕಿವಿ-ಮೂಗು, ಗಂಟಲು ತಪಾಸಣೆ

ದಾವಣಗೆರೆ, ಜು. 6- ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆ (ಹಳೇ ಅಶ್ವಿನಿ) ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ನುರಿತ ಕಿವಿ, ಮೂಗು ಮತ್ತು ಗಂಟಲು ಶಸ್ತ್ರ ಚಿಕಿತ್ಸಾ ವೈದ್ಯರಿಂದ ಉಚಿತ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವೈದ್ಯರ ಸಲಹೆ ಮೇರೆಗೆ ಉಚಿತವಾಗಿ ಔಷಧಿ ವಿತರಣೆ ಮತ್ತು ಉಚಿತವಾಗಿ ಶ್ರವಣ ಯಂತ್ರಗಳನ್ನು ನೀಡಲಾಗುವುದು. ಷಾ ಪೂಲ್‌ಚಂದ್ ಅಂಬಾಲಾಲ್ ಇವರು ಶ್ರವಣ ಯಂತ್ರಗಳನ್ನು ಕೊಡುಗೆಯಾಗಿ ನೀಡುವರು. ಉಚಿತವಾಗಿ ಸೌಲಭ್ಯ ಪಡೆಯುವವರು ಆಸ್ಪತ್ರೆ ಮೊ.ನಂ. 96060 48423ಗೆ ಇದೇ ದಿನಾಂಕ 8 ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕೆಂದು ಆಸ್ಪತ್ರೆಯ ಕಮಿಟಿ ಟ್ರಸ್ಟ್‌ನ ಅಧ್ಯಕ್ಷ ಸಂಘವಿ ಮಹಾವೀರ್ ಜೈನ್ ವಿನಂತಿಸಿದ್ದಾರೆ.

**ಕಾಣೆಯಾಗಿದ್ದಾರೆ**



**ಶ್ರೀಮತಿ ಜಯಮ್ಮ (74 ವರ್ಷ)**

ಇವರು ದಿನಾಂಕ: 18-06-2022 ರಂದು ಬೆಳಿಗ್ಗೆ 11:30 ಗಂಟೆಗೆ ಮನೆಯಿಂದ ಹೊರಗೆ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿರುವುದಿಲ್ಲ. ಇವರು ಮಾನಸಿಕ ಅಸ್ವಸ್ಥರಾಗಿರುತ್ತಾರೆ. ಕನ್ನಡ, ತಮಿಳು ಭಾಷೆಯನ್ನು ಮಾತನಾಡುತ್ತಾರೆ. ಬೆಂಗಳೂರಿನ ರಾಜಾಜಿನಗರದಿಂದ ಕಾಣೆಯಾಗಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಈ ಕೆಳಕಂಡ ದೂರವಾಣಿಗೆ ತಿಳಿಸಬೇಕಾಗಿ ವಿನಂತಿ.

99868 09342
78996 76066

## ಶ್ರೀ ಅಕ್ಕಮಹಾದೇವಿ ಸಮಾಜ (ರಿ)

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ 2021-22ನೇ ಶೈಕ್ಷಣಿಕ ವರ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ 95% ಕ್ಕಿಂತ ಅಧಿಕ ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಆರ್ಥಿಕವಾಗಿ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಉನ್ನತ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ಕೊಟ್ಟು ಪುರಸ್ಕರಿಸಲಾಗುವುದು. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಶಾಲಾ ಕಾಲೇಜಿನಿಂದ ದೃಢೀಕರಿಸಿದ ಅರ್ಜಿಯನ್ನು ದಿನಾಂಕ 11.7.2022ರೊಳಗೆ ಸಲ್ಲಿಸತಕ್ಕದ್ದು. ಅರ್ಜಿಯಲ್ಲಿ ಮೊಬೈಲ್ ನಂ. ನಮೂದಿಸುವುದು ಕಡ್ಡಾಯ.

ಆಡಳಿತ ಮಂಡಳಿ
ಶ್ರೀ ಅಕ್ಕಮಹಾದೇವಿ ಸಮಾಜ (ರಿ.), ದಾವಣಗೆರೆ

# ವಚನಕಾರರ ಸಮಾಜಮುಖಿ ಪರಿವರ್ತನೆಗಳು ವಿಶ್ವಮಾನ್ಯ

## ಅಮೆರಿಕಾದಲ್ಲಿ ಜರುಗಿದ ಶರಣ ಸಮನ್ವಯ ಸಮಾವೇಶದಲ್ಲಿ ಶ್ರೀ ಮುರುಘಾ ಶರಣರು



ಚಿತ್ರದುರ್ಗ, ಜು.6- ವಚನಕಾರರು ನೀಡಿದ ಕೊಡುಗೆಗಳು, ಅವರು ತಂದಂತಹ ಸಮಾಜಮುಖಿ ಪರಿವರ್ತನೆಗಳು ವಿಶ್ವ ಮಾನ್ಯ ಎಂದು ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಅಮೆರಿಕಾದ ಹೂಸ್ಟನ್‌ನಲ್ಲಿ ನಡೆದ ವಿಎಸ್‌ಎನ್‌ಎ 45ನೇ ಶರಣ ಸಮನ್ವಯ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಗಳು, ದೇಶ-ವಿದೇಶಗಳಲ್ಲಿ ಇಂದು ಬಸವ ತತ್ವ ಪ್ರಸಾರ ಆಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಪ್ರಾಚೀನತೆ ಇರಲಿ, ಅದರೊಂದಿಗೆ ಪ್ರಯೋಗ ಶೀಲತೆ ಬಹುಮುಖ್ಯ ಎಂದು ನುಡಿದರು.

ಜಗತ್ತಿನ ಇತಿಹಾಸದಲ್ಲಿ ಆಗೊಮ್ಮೆ, ಈಗೊಮ್ಮೆ ಕ್ರಾಂತಿ ನಡೆಯುತ್ತಾ ಬಂದಿದೆ. ಯಾವುದೇ ಕ್ರಾಂತಿಯು ಮಾನವನ ವಿಚಾರ ಶಕ್ತಿಯನ್ನು ಮಾತ್ರವಲ್ಲದೆ, ಸಾಮಾಜಿಕ ಸ್ಥಿತಿಯನ್ನು ಪರಿವರ್ತಿಸಬಲ್ಲದು. ಇದು ವಿಕಾಸದ ಪ್ರಕ್ರಿಯೆ. ಕ್ರಾಂತಿಯ ಪ್ರಭಾವದಿಂದಾಗಿ ಮಾನವ ಜಗತ್ತಿನಲ್ಲಿ ಏನೆಲ್ಲ ಸುಧಾರಣೆ ಸಾಧ್ಯವಾಗಿದೆ. ಇಷ್ಟು ಸುಸಂಸ್ಕೃತ ಹಂತವನ್ನು ತಲುಪಿರುವ ಆತನ ಆಂತರ್ಯದಲ್ಲಿ ತಳಮಳ, ಬಹಿರಂಗದಲ್ಲಿ ಗೊಂದಲ ಕಾಣಿಸಿಕೊಳ್ಳುತ್ತದೆ. ಆಪ್ತರಿಂದಲೇ ತೊಡಕು, ತೊಂದರೆ, ತಾಪತ್ರಯ, ಕಿರುಕುಳ. ಹೆಜ್ಜೆ ಹೆಜ್ಜೆಗು ನಿಂದನೆ, ಅವಮಾನ. ಅವಮಾನದಿಂದ ಮಾನಕ್ಕೆ ಧಕ್ಕೆ, ಅಭಿಮಾನ ಇದ್ದಲ್ಲಿ ಅವಮಾನ ಇರುವುದಿಲ್ಲ. ಇವುಗಳ ನಡುವೆ ಮಾನವ ಎದ್ದುಬರಬೇಕು ಎಂದರು.

ಸಣ್ಣಪುಟ್ಟ ಕಾಯಕದ ಮುಖಾಂತರ ದೊಡ್ಡ ಆದರ್ಶ ತೋರಿದ್ದು, ಅವರ ದೊಡ್ಡತನ. ಇಂದು ದೊಡ್ಡ ದೊಡ್ಡ ಮನೆಗಳು ಸಣ್ಣ ವ್ಯಕ್ತಿತ್ವಗಳು. ಆದರ್ಶವಿಲ್ಲದ ಬದುಕು ಉನ್ನತಿಗೆ ಏರಲಾರದು. ಉನ್ನತೀಕರಣದಹೃದಯವೇ ಆದರ್ಶ. ಮನೆಗಳು ಹೇಗಾದರು ಇರಲಿ, ಅವುಗಳ ಒಳಗಿನ ಬದುಕು ಉನ್ನತವಾಗಿರಲಿ ಎಂಬುದು ಇಂದಿನ ಧ್ಯೇಯ. ಆಡಂಬರ ಕಡಿಮೆ ಆಗಲಿ; ಆದರ್ಶದೆಡೆಗೆ ತುಡಿತವಿರಲಿ ಎಂದು ತಿಳಿಸಿದರು. ವಿಎಸ್‌ಎನ್‌ಎ ಸಂಘಟನೆಯ ಅಧ್ಯಕ್ಷ ಹರೀಶ್ ಹಿರೇಮಠ ಇತರರು ಭಾಗವಹಿಸಿದ್ದರು.

## 1.36 ಕೋಟಿ ಡೋಸ್ ಲಸಿಕೆ ಕಸಕ್ಕೆ

ಒಟ್ಟಾವ, ಜು. 6 – ಅಸ್ಟ್ರಾಜೆನೆಕಾದ 1.36 ಕೋಟಿ ಡೋಸ್ ಕೊರೊನಾ ಲಸಿಕೆಗೆ ದೇಶದ ಒಳಗೆ ಹಾಗೂ ಹೊರ ದೇಶಗಳಲ್ಲೂ ಬೇಡಿಕೆ ಬರದ ಕಾರಣ, ಅದನ್ನು ಕಸಕ್ಕೆ ಹಾಕಲು ಕೆನಡಾ ತೀರ್ಮಾನಿಸಿದೆ.

2 ಕೋಟಿ ಡೋಸ್ ಲಸಿಕೆ ಪಡೆಯಲು ಅಸ್ಟ್ರಾಜೆನೆಕಾ ಜೊತೆ ಕೆನಡಾ 2020ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. 23 ಲಕ್ಷ ಕೆನಡಿಯನ್ನರು 2021ರಲ್ಲಿ ಲಸಿಕೆ ಪಡೆದಿದ್ದರು. ಅಸ್ಟ್ರಾಜೆನೆಕಾ ಲಸಿಕೆಯಿಂದ ರಕ್ತ ಹೆಪ್ಪುಗಟ್ಟುವ ಅಪರೂಪದ ಅಡ್ಡಪರಿಣಾಮಗಳು ಕಂಡು ಬಂದಿದ್ದವು. ಈ ಹಿನ್ನೆಲೆಯಲ್ಲಿ ಅಸ್ಟ್ರಾಜೆನೆಕಾ ಲಸಿಕೆಗೆ ಕೆನಡಾ ಒತ್ತು ನೀಡಿರಲಿಲ್ಲ.

1.77 ಕೋಟಿ ಡೋಸ್ ಲಸಿಕೆ ದಾನ ಮಾಡುವುದಾಗಿ ಕೆನಡಾ ಜುಲೈ 2021ರಲ್ಲಿ ತಿಳಿಸಿತ್ತು. ಆದರೆ, ಯಾರೂ ಲಸಿಕೆ ಪಡೆಯಲು ಮುಂದೆ ಬಾರದ ಕಾರಣ, ಇವುಗಳ ಅವಧಿ ಮೀರುತ್ತಿದೆ. ಈ ಹಿನ್ನೆಲೆಯಲ್ಲಿ 1.36 ಕೋಟಿ ಡೋಸ್ ಲಸಿಕೆ ವಿಲೇವಾರಿ ಮಾಡಲು ಕೆನಡಾ ತೀರ್ಮಾನಿಸಿದೆ.

## ನಗರದಲ್ಲಿ 11ರಿಂದ ಮಹಾಮಂಡಲಾಭಿಷೇಕ



ದಾವಣಗೆರೆ, ಜು. 6 - ನಗರದ ಪಿ. ಹಾಲೇಶಪ್ಪ ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ ಭಕ್ತ ಮಂಡಳಿ ವತಿಯಿಂದ ಇದೇ ದಿನಾಂಕ 11 ರಿಂದ 27 ರ ಶನಿವಾರದವರೆಗೆ 48 ದಿನಗಳ ಕಾಲ 10ನೇ ವರ್ಷದ ಮಹಾಮಂಡಲಾಭಿಷೇಕ ನಡೆಯಲಿದೆ. ಕೊನೆಯ ದಿನದಂದು ತಾಯಿಯವರೆಗೆ ಮಹಾಪೂಜೆ, ವಿಶೇಷ ಅಲಂಕಾರವಿದ್ದು, 12.30 ಕ್ಕೆ ಪ್ರಸಾದ ವಿನಿಯೋಗವಿರುತ್ತದೆ.


# ತಕ್ಷಣ ಬೇಕಾಗಿದ್ದಾರೆ

ನೂತನವಾಗಿ ಪ್ರಾರಂಭಗೊಳ್ಳಲಿರುವ Rhiconex Solutions ಕಂಪನಿಗೆ ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.

**ಬಾಯ್ಲರ್ ನಿರ್ವಾಹಕರು**

Class 1 or Class 2 Certificate ಇರುವ ಬಾಯ್ಲರ್ ನಿರ್ವಾಹಕರು ಬೇಕಾಗಿದ್ದಾರೆ.

**Accountant**

B.Com Graduate with Tally (ERP) Knowledge Min 4 Years Experience.

ಆಸಕ್ತ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ತಮ್ಮ ಅಗತ್ಯ ದಾಖಲಾತಿಗಳೊಂದಿಗೆ ಸಂಪರ್ಕಿಸಿ.

**9901 6767 00**


## ಶಾಸಕರ ನಂತರ ಶಿವಸೇನೆಯಲ್ಲಿ ಈಗ ಸಂಸದರ ಬಂಡಾಯ?

ಮುಂಬೈ, ಜು. 6 – ಶಿವಸೇನೆ ಶಾಸಕರ ಬಂಡಾಯದ ನಂತರ, ಈಗ ಪಕ್ಷದ ಸಂಸದರು ಬಂಡಾಯ ಏಳುವ ಮಾತುಗಳು ಕೇಳಿ ಬರುತ್ತಿವೆ. ಪಕ್ಷ 18 ಲೋಕಸಭಾ ಸದಸ್ಯರನ್ನು ಹೊಂದಿದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಎನ್.ಡಿ.ಎ. ಅಭ್ಯರ್ಥಿಯಾಗಿರುವ ದ್ರೌಪದಿ ಮುರ್ಮು ಅವರಿಗೆ ಬೆಂಬಲ ನೀಡುವಂತೆ ಸಂಸದ ರಾಹುಲ್ ಶಿವಾಲೆ ಅವರು ಪಕ್ಷದ ಅಧ್ಯಕ್ಷ ಉದ್ಧವ್ ಠಾಕ್ರೆಗೆ ಒತ್ತಾಯಿಸಿದ್ದರು.

ನಂತರ ಹೇಳಿಕೆ ನೀಡಿದ್ದ ಬಂಡಾಯ ಶಾಸಕ ಗುಲಾಬ್‌ರಾವ್ ಪಾಟೀಲ್, ಶಿವಸೇನೆಯ 18 ಸಂಸದರ ಪೈಕಿ, ನಮಗೆ 12 ಸಂಸದರ ಬೆಂಬಲ ಇದೆ ಎಂದಿದ್ದರು. ಆದರೆ, ಶಿವಸೇನೆ ಈ ಹೇಳಿಕೆಯನ್ನು ತಳ್ಳಿ ಹಾಕಿದೆ. ಶಿವಸೇನೆ ಸಂಸದರಿಗೆ ಮುಂಬರುವ ಲೋಕಸಭಾ ಚುನಾವಣೆಯ ಸವಾಲಿನ ಚಿಂತೆ ಇದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಶಿವಸೇನೆ ಜೊತೆಯಾಗಿ ಲೋಕಸಭಾ ಚುನಾವಣೆ ಎದುರಿಸಿದ್ದವು.

ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಜನಪ್ರಿಯತೆಯನ್ನು ಶಿವಸೇನೆ ಸಂಸದರು ಪ್ರಮುಖವಾಗಿ ಬಳಸಿಕೊಂಡಿದ್ದರು. ಹಲವು ಕ್ಷೇತ್ರಗಳಲ್ಲಿ ಶಿವಸೇನೆ ಅಭ್ಯರ್ಥಿಗಳು ಬಾಳ್ ಠಾಕ್ರೆ ಹಾಗೂ ಉದ್ಧವ್ ಠಾಕ್ರೆ ಅವರಿಗಿಂತ ಪ್ರಧಾನ ಮಂತ್ರಿ ಮೋದಿ ಅವರ ಚಿತ್ರಗಳನ್ನೇ ಪ್ರಮುಖವಾಗಿ ಬಿಂಬಿಸಿದ್ದರು. ಅಲ್ಲದೇ, ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಸಂಸದರಿಗೆ ಶಾಸಕರ ಬೆಂಬಲದ ಅಗತ್ಯವೂ ಇದೆ. ಹೀಗಾಗಿ ಸಂಸದರು ತೂಗುಯ್ಯಾಲೆಯಲ್ಲಿದ್ದಾರೆ ಎನ್ನಲಾಗುತ್ತಿದೆ.



ಮಲೇಬೆನ್ನೂರು ಸಮೀಪದ ಹೊಳೆಸಿರಿಗೆರೆ ಗ್ರಾಮದ ಜಮೀನಿನಲ್ಲಿ ಬೆಳೆದಿರುವ ಸೋಯಾಬೀನ್‌ನಲ್ಲಿ ರೈತರು ಭಾನುವಾರ ಎಡೆಕುಂಟೆ ಹೊಡೆದರು. ಚಿತ್ರ : ಜಿಗಳಿ ಪ್ರಕಾಶ್

## ತಂದೆಯನ್ನೇ ಹತ್ಯೆಗೈದ ಮಗ

ದಾವಣಗೆರೆ, ಜು.6- ಹೆತ್ತ ತಂದೆಯನ್ನೇ ಮಗನೋರ್ವ ಕೊಲೆ ಮಾಡಿರುವ ಘಟನೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕತ್ತಲಗೆರೆ ಗ್ರಾಮದ ಸಮೀಪದ ಎಸ್.ಆರ್. ಕ್ಯಾಂಪ್‌ನಲ್ಲಿ ಇಂದು ರಾತ್ರಿ ನಡೆದಿದೆ.

ಎಸ್.ಆರ್. ಕ್ಯಾಂಪ್‌ನ ಮಂಜುನಾಥ (60) ಕೊಲೆಯಾದ ತಂದೆ. ಮಗ ತಿಪ್ಪೇಶ್ (23) ಕೊಲೆ ಮಾಡಿದ ಆರೋಪಿ. ಮನೆಯ ವಿಚಾರದಲ್ಲಿ ಇಂದು ತಂದೆ ಮಗನ ನಡುವೆ ವಾಗ್ವಾದ ಉಂಟಾಗಿ ಗಲಾಟೆಯಾಗಿದೆ. ಅದು ವಿಕೋಪಕ್ಕೆ ತಿರುಗಿ ತಿಪ್ಪೇಶ್ ತನ್ನ ತಂದೆಗೆ ಹೊಡೆದಿದ್ದಾನೆ. ಮಂಜುನಾಥ ಮೃತಪಟ್ಟಿದ್ದಾರೆ.

**ಎಸ್ಪಿ ಭೇಟಿ :** ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಿ. ಬಸರಗಿ, ಚನ್ನಗಿರಿ ಡಿವೈಎಸ್ಪಿ ಸಂತೋಷ್, ಸಂತೇಬೆನ್ನೂರು ಸಿಪಿಐ ಮಹೇಶ್ ಭೇಟಿ ನೀಡಿ ಬಸವಾಪಟ್ಟಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ ಮಗ ತಿಪ್ಪೇಶ್ ಗಾಗಿ ಪೊಲೀಸರು ಬಲೆಬೀಸಿದ್ದಾರೆ.

## ಕ್ಷತ್ರಿಯ ಮರಾಠ ಸಮಾಜದ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಜು. 6- ಕ್ಷತ್ರಿಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ ನಗರದ ಕ್ಷತ್ರಿಯ ಮರಾಠ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಹಿರಿಯ ಮುಖಂಡ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 75ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಪುರಸ್ಕಾರಕ್ಕೆ ಅರ್ಹರಾಗಿದ್ದಾರೆ. ಶೇ. 90 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಇದೇ ದಿನಾಂಕ 10ರೊಳಗೆ ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ಯಶವಂತರಾವ್ ಜಾಧವ್ (94480-05060), ಶ್ರೀಮತಿ ಗೌರ ಬಾಯಿ ಮೋಹಿತೆ (99160-09666), ತಿಪ್ಪೇಶರಾವ್ ಚವ್ಹಾಣ್ (94486-55851), ಜಿ.ಎಂ. ಪರಶುರಾಮ್ ರಾವ್ ಸಾಳಂಕೆ (94483-09883), ತಾನೋಜಿರಾವ್ ಸಿಂಧೆ (98800-64641), ಅಣ್ಣೋಜಿರಾವ್ ಸಿಂಧೆ (99022-17797) ಅವರನ್ನು ಸಂಪರ್ಕಿಸಬಹುದು.

## ಸಂವಿಧಾನ ಟೀಕಿಸಿದ್ದ ಕೇರಳ ಸಚಿವ ಚೆರಿಯನ್ ರಾಜೀನಾಮೆ

ತಿರುವನಂತಪುರಂ, ಜು. 6 – ಸಂವಿಧಾನದ ಕುರಿತು ಟೀಕಿಸಿದ್ದಕ್ಕಾಗಿ ಆಕ್ಷೇಪಕ್ಕೆ ಗುರಿಯಾಗಿದ್ದ ಕೇರಳ ಸಚಿವ ಸಾಜಿ ಚೆರಿಯನ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಪಿಣರಾಯಿ ವಿಜಯನ್ ನೇತೃತ್ವದ ಎರಡನೇ ಅವಧಿಯ ಎಲ್.ಡಿ.ಎಫ್. ಸರ್ಕಾರದಲ್ಲಿ ರಾಜೀನಾಮೆ ನೀಡಿದ ಮೊದಲ ಸಚಿವ ಅವರಾಗಿದ್ದಾರೆ. ಚೆರಿಯನ್ ರಾಜೀನಾಮೆ ಅಗತ್ಯವಿಲ್ಲ ಎಂದು ಸಿಪಿಐ (ಎಂ) ತಿಳಿಸಿತ್ತು. ಆದರೆ, ಪ್ರತಿಪಕ್ಷಗಳ ಒತ್ತಡಕ್ಕೆ ಮಣಿದಿರುವ ಸಚಿವ ಚೆರಿಯನ್ ರಾಜೀನಾಮೆ ಸಲ್ಲಿಸಿದ್ದಾರೆ.

## ಪ್ರೇಮಾಲಯದಲ್ಲಿ ಸಂಸದ ಸಿದ್ದೇಶ್ವರರ ಅರ್ಥಪೂರ್ಣ ಹುಟ್ಟುಹಬ್ಬ



ಕೇಂದ್ರ ಸರ್ಕಾರದ ಮಾಜಿ ಸಚಿವರೂ, ದಾವಣಗೆರೆ ಕ್ಷೇತ್ರದ ಲೋಕಸಭಾ ಸದಸ್ಯರೂ ಆದ ಶ್ರೀ ಜಿ.ಎಂ. ಸಿದ್ದೇಶ್ವರ ಅವರ 70ನೇ ವರ್ಷದ ಹುಟ್ಟುಹಬ್ಬವನ್ನು ಅವರ ಅಭಿಮಾನಿ ಬಳಗದಿಂದ ದಾವಣಗೆರೆಯ ಪ್ರೇಮಾಲಯದಲ್ಲಿ ವೃದ್ಧರಿಗೆ ದವಸ-ಧಾನ್ಯ ವಿತರಿಸುವುದರ ಮೂಲಕ ಅರ್ಥಪೂರ್ಣವಾಗಿ ನಡೆಸಲಾಯಿತು. **ಶ್ರೀ ಸಿದ್ದೇಶ್ವರ ಮತ್ತು ಅವರ ಧರ್ಮಪತ್ನಿ** ಶ್ರೀಮತಿ ಗಾಯತ್ರಿ ಸಿದ್ದೇಶ್ವರ ದಂಪತಿ ಕೇಕ್ ಕತ್ತರಿಸುವುದರೊಂದಿಗೆ ಶ್ರೀಯುತರ ಜನ್ಮದಿನವನ್ನು ಸರಳವಾಗಿ ನಡೆಸಲಾಯಿತು. ದೂಡಾ ಮಾಜಿ ಅಧ್ಯಕ್ಷರೂ, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷರೂ ಆದ ಶ್ರೀ ದೇವರಮನೆ ಶಿವಕುಮಾರ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಮುಖಂಡರುಗಳಾದ ಶ್ರೀನಿವಾಸ್ ದಾಸಕರಿಯಪ್ಪ, ಜಯಪ್ರಕಾಶ್ ಮಾಗಿ, **ಪ್ರೇಮಾಲಯದ ಕಾರ್ಯದರ್ಶಿ** ಸುನೀತಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




# ಹೃದಯ ತುಂಬಿದ ಕೃತಜ್ಞತೆಗಳು





ಆತ್ಮೀಯರೇ,

ನನ್ನ ಆತ್ಮೀಯ ಒಡನಾಡಿಗಳೂ, ಜೀವದ ಗೆಳೆಯರೂ ಆದ ಶ್ರೀ ಶ್ರೀನಿವಾಸ್ ಶಿವಗಂಗಾ ಅವರ ಜನ್ಮದಿನದಂದು ವೈಯಕ್ತಿಕವಾಗಿ ಕರೆ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಸಂದೇಶಗಳನ್ನು ಕಳುಹಿಸಿ, ಶುಭಾಶಯ ಕೋರಿದ ಪ್ರತಿಯೊಬ್ಬರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು. ನೀವುಗಳು ಶ್ರೀನಿವಾಸ್ ಶಿವಗಂಗಾ ಅವರ ಮೇಲೆ ತೋರಿರುವ ಈ ಪ್ರೀತಿಗೆ ಶ್ರೀಯುತರು ಸದಾ ಚಿರಋಣಿಯಾಗಿರುತ್ತಾರೆ. ನಿಮ್ಮ ಈ ಪ್ರೀತಿ, ವಿಶ್ವಾಸ ಹಾಗೂ ಬೆಂಬಲ ಸದಾ ಶ್ರೀಯುತರ ಮೇಲೆ ಹೀಗೆಯೇ ಇರಲಿ ಎಂದು ಆಶಿಸುತ್ತೇನೆ.

**ಶ್ರೀ ಎನ್. ಸುರೇಶ್ ಶಾಮನೂರು**

ಮಾಜಿ ಸದಸ್ಯರು, ನಗರ ಪಾಲಿಕೆ, ದಾವಣಗೆರೆ.

**ಯತೀಶ್ ಜೆ. ಮತ್ತು ಶಾಮನೂರು ಗ್ರಾಮಸ್ಥರು**

ಮಾಜಿ ಸಚಿವರಾದ **ಶ್ರೀ ಶಾಮನೂರು ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ**





SUNSHINE PURANTAR HOSPITAL

Rainbow Children's Hospital | BirthRight BY RAINBOW HOSPITALS Your Right to a Safe Delivery

# ಮಕ್ಕಳಿಗಾಗಿ ವಿಶೇಷ ಆರೈಕೆ ಏಕೆಂದರೆ ಪ್ರತಿ ಮಗುವೂ ವಿಶೇಷವಾಗಿದೆ.

**ಭಾರತದ ನಂಬರ್1 ಮಕ್ಕಳ ಆಸ್ಪತ್ರೆಯ ನೆಟ್ವರ್ಕ್**

**ರೈನ್ಬೋ ಚಿಲ್ಡ್ರನ್ಸ್ ಆಸ್ಪತ್ರೆ, ಬೆಂಗಳೂರು**
ಸಹಯೋಗದೊಂದಿಗೆ
**ಸನ್ಶೈನ್ ಪುರಂತರ ಆಸ್ಪತ್ರೆ**

ದಾವಣಗೆರೆಯಲ್ಲಿ ಮಕ್ಕಳಿಗಾಗಿ ಪರಿಣಿತ ಆರೈಕೆಯ ಸೇವೆಯನ್ನು ತರುತ್ತದೆ, ಆದ್ದರಿಂದ ನಿಮ್ಮ ಮಗುವಿಗೆ ಮನೆಯ ಸಮೀಪದಲ್ಲಿ ಗುಣಮಟ್ಟದ ಆರೈಕೆಯ ಸೇವೆಯನ್ನು ಪಡೆಯಬಹುದು.



- ಮಕ್ಕಳ ನರವಿಜ್ಞಾನ
- ಮಕ್ಕಳ ಸಂಧಿವಾತಶಾಸ್ತ್ರ
- ಮಕ್ಕಳ ರಕ್ತವಿಜ್ಞಾನ
- ಮಕ್ಕಳ ಮೂಳೆಶಾಸ್ತ್ರ

**ತಿಂಗಳ ಪ್ರತಿ 2 ನೇ ಶುಕ್ರವಾರದಂದು ಸಮಾಲೋಚನೆ ಲಭ್ಯವಿದೆ**

ಅಪಾಯಿಂಟ್ಮೆಂಟ್ ನ್ನು ಬುಕ್ ಮಾಡಲು ಇದಕ್ಕೆ ಕರೆ ಮಾಡಿರಿ
94489 55667 | 88846 34545
88844 36021

T&C apply

Rainbow Children's Hospital - Marathahalli
Marathahalli-KR Puram Outer Ring Rd, Doddanekundi, Marathahalli, Bengaluru - 560037.
www.rainbowhospitals.in


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte